(6) ಪ್ರಕಟಣೆ

ವಿಷಯ :- ಶ್ರೀ ಅಜಯ ಕುಮಾರ್ ಸರ್ ನಾಯಕ್ ಹಾಗೂ ಶ್ರೀ ಐ.ಎಂ. ಜಯರಾಮ ಶೆಟ್ಟಿಯವರ ರಾಜೀನಾಮೆ.

ಅಧ್ಯಕ್ಷರು :- ವಿಧಾನಸಭಾ ಸದಸ್ಯರುಗಳಾದ ಶ್ರೀ ಅಜಯಕುಮಾರ್ ಸರ್ ನಾಯಕ ಹಾಗೂ ಶ್ರೀ ಐ.ಎಂ. ಜಯರಾಮಶೆಟ್ಟಿ ಅವರುಗಳು ವಿಧಾನಸಭೆಯ ಸದಸ್ಯತ್ವಕ್ಕೆ ದಿನಾಂಕ 23-3-1998 ರಂದು ರಾಜೀನಾಮೆ ನೀಡಿದ್ದು ಸದರಿ ರಾಜೀನಾಮೆಗಳನ್ನು ದಿನಾಂಕ 23-3-1998 ರಿಂದ ಜಾರಿಗೆಬರುವಂತೆ ಅಂಗೀಕರಿಸಿದ್ದೇನೆ.

(7) ವಿತ್ತೀಯ ಕಲಾಪಗಳು

1998-99 ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ (ಮುಂ.ವ)

ಅಧ್ಯಕ್ಷರು :- ಶ್ರೀ ಸುರೇಶ್ ಕುಮಾರ್ ರವರೇ, ತಾವು ಬಜೆಟ್ ಬಗ್ಗೆ ಚರ್ಚೆ ಮುಂದುವರಿಸಬಹುದು. I am sorry, you have to speak in a situation like this.

★ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :- ಮಾನ್ಯ ಅಧ್ಯಕ್ಷರೆ, ಏನು ಮಾಡುವುದು, ಮಂತ್ರಿಗಳು, ಸದಸ್ಯರುಗಳು ಸದನದಲ್ಲಿ ಇಲ್ಲದಿದ್ದಾಗಲೂ ಒಂದು ವಿಷಯದ ಬಗ್ಗೆ ಚರ್ಚೆ ಮಾಡುವಂಥದ್ದಕ್ಕೆ ಹೊಂದಿಕೊಂಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ- ಮಧ್ಯಾಹ್ನ ಎಲ್ಲರೂ ಊಟ ಮತ್ತು ಇನ್ನಿತರ ಕೆಲಸಗಳಿಗೆ ಹೊರಗಡೆ ಹೋಗಿಬರಲಿ ಎನ್ನುವ ಸದುದ್ದೇಶ ಇಟ್ಟುಕೊಂಡು ತಾವು ಮಧ್ಯಾಹ್ನ ಒಂದು ಗಂಟೆ ಕಾಲ ಸದನದ ಕಾರ್ಯಕಲಾಪಗಳಿಗೆ ಬ್ರೇಕ್ ಕೊಡುತ್ತೀರಿ. ಆದರೆ ತಮ್ಮ ಉದ್ದೇಶ ಏನೂ ಸಫಲವಾಗುತ್ತಿಲ್ಲ. ಆದ್ದರಿಂದ ಮಧ್ಯಾಹ್ನ ಬ್ರೇಕ್ ಕೊಡದೆಯೇ ಕಂಟಿನ್ಯೂ ಆಗಿ ಸದನದ ಕಾರ್ಯಕಲಾಪಗಳು ನಡೆದರೆ ಒಳ್ಳೆಯದಾಗಬಹುದು. ಮಧ್ಯಾಹ್ನದ ಬ್ರೇಕ್ ಅಗತ್ಯವಿಲ್ಲವೆಂದು ತೋರುತ್ತದೆ.

ಅಧ್ಯಕ್ಷರು :- ನಾನು ಅದಕ್ಕೆ ಸಿದ್ಧನಿದ್ದೇನೆ. ಇಲ್ಲಿ ಏನೇನು ಪ್ರಯೋಗಗಳನ್ನು ಮಾಡುವುದಕ್ಕಾಗುತ್ತದೋ ಅವೆಲ್ಲವನ್ನು ಮಾಡುತ್ತಿದ್ದೇವೆ. ಸದನದ ಕಾರ್ಯಕಲಾಪಗಳನ್ನು ಲಂಚ್ ಬ್ರೇಕ್ ಕೊಟ್ಟು ನೋಡಿದೆವು. ಪ್ರಾರಂಭದಲ್ಲಿ ಮಧ್ಯಾಹ್ನದ ಊಟವನ್ನು ಸದಸ್ಯರಿಗೆ ಸದನದ ಪಕ್ಕದಲ್ಲಿಯೇ ಅರೇಂಜ್ ಮಾಡಿ ನೋಡಿದೆವು, ಇಷ್ಟೆಲ್ಲಾ ಮಾಡಿದರೂ ಏನೂ ಪ್ರಯೋಜನ ಕಾಣುತ್ತಿಲ್ಲ. ಮಾನ್ಯ ಯಡಿಯೂರಪ್ಪನವರೇ, ಈಗ ಏನಾಗಿದೆ ಎಂದರೆ ಸದನಕ್ಕೆ ಬಂದು ಕುಳಿತುಕೊಂಡು ಕಾರ್ಯಕಲಾಪದಲ್ಲಿ ಭಾಗವಹಿಸುವವರು ಹೊರಗಡೆಗೆ ಹೋಗಿದ್ದರೆ ಅವರು ವಾಪಸ್ಸು ಸದನಕ್ಕೆ ಬಂದುಬಿಡುತ್ತಾರೆ. ಆದರೆ ಕೆಲವರು ಸದನದ ಒಳಗಡೆಗೆ ಬರುವುದೇ ಇಲ್ಲ. ಅವರು ಸಹಿ ಮಾಡಿ ಸದನಕ್ಕೆ ಬರದೇ ಅಲ್ಲಿಂದ ಹಾಗೆಯೇ ಹೊರಟುಹೋಗುತ್ತಾರೆ. ಇದಕ್ಕೆ ಏನು ಮಾಡುವುದು? ಆಡಳಿತ ಪಕ್ಷದವರ ಸಾಲಿನಲ್ಲಿ 12 ಜನ ಸದಸ್ಯರು ಇದ್ದಾರೆ. ವಿರೋಧ ಪಕ್ಷದವರ ಸಾಲಿನಲ್ಲಿ 15 ಜನ ಸದಸ್ಯರುಗಳು ಇದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೆ, ಸದಸ್ಯರುಗಳು ಮತ್ತು ಮಂತ್ರಿಗಳು ಸದನದಲ್ಲಿ ಹಾಜರಿರುವಂತೆ ಮಾಡುವುದಕ್ಕೆ ತಾವೇ ಏನಾದರೂ ಪರಿಹಾರ ಕಂಡು ಹಿಡಿಯಬೇಕು. ಸದನ ಯಾವಾಗಲೂ ಇದೇ ಸಿದ್ಧಾಂತಕ್ಕೆ ಬಂದರೆ ನಮ್ಮ ಬಗ್ಗೆ ಆರಿಸಿ ಕಳುಹಿಸಿದಂಥ ಜನರು ತಪ್ಪು ತಿಳಿದುಕೊಳ್ಳತಕ್ಕಂಥ ಸಾಧ್ಯತೆಗಳು ಹೆಚ್ಚು ಇರುತ್ತದೆ.

ಅಧ್ಯಕ್ಷರು:- ಸದನದಲ್ಲಿ ಏನೇನು ನಡೆಯುತ್ತದೆ, ಏನು ಮಾಡಿದರು ಇತ್ಯಾದಿ ಬಗ್ಗೆ ಬರೆದು ತಿಳಿಸುವುದಕ್ಕೆ ಪತ್ರಕರ್ತರು ಇದ್ದೇ ಇದ್ದಾರೆ. ನಮ್ಮ ವಿಚಾರವೆಲ್ಲವನ್ನು ಅವರು ಬರೆದು ತಿಳಿಸುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಹೆಚ್ಚು ಕಡಿಮೆ ಯಾವಾಗಲೂ ಸದನದಲ್ಲಿ ಸಾಕಷ್ಟು ಸದಸ್ಯರುಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಇಲ್ಲದಿರುವಂಥದ್ದು ದೊಡ್ಡ ಸಮಸ್ಯೆಯಾಗಿದೆ. ಮೊದಲು ಹೀಗೆ ಇರಲಿಲ್ಲ. ಆದರೆ ಇತ್ತೀಚೆಗೆ ಏನೋ ಸ್ವಲ್ಪ ವ್ಯತ್ಯಾಸವಾದ ಹಾಗೆ ತೋರುತ್ತದೆ.

ಅಧ್ಯಕ್ಷರು:- ಸದನದಲ್ಲಿ ಸದಸ್ಯರು, ಮಂತ್ರಿಗಳು ಸದನ ನಡೆಯುವಾಗ ಇಲ್ಲದಿರುವಂಥಾದ್ದು ಮೊದಲಿನಿಂದಲೂ ಇದೆ. ಈ ಸಮಸ್ಯೆ ಇತ್ತೀಚೆಗೆ ಪ್ರಾರಂಭವಾದುದು ಅಲ್ಲ. ನಾನೂ ಸಹ 1978 ರಿಂದಲೂ ಈ ಸದನದ ಸದಸ್ಯನಾಗಿದ್ದೇನೆ. ಇದರ ಮಧ್ಯೆ ಸ್ವಲ್ಪಕಾಲ ಸದ್ಯನಾಗಿರಲಿಲ್ಲ. ಆಗಲೂ ಕೂಡ ಇದೇ ಪರಿಸ್ಥಿತಿ ಇತ್ತು.

ಶ್ರೀ ವಿಶ್ವೇಶ್ವರ ಹೆಗಡೆ:- ಮಾನ್ಯ ಅಧ್ಯಕ್ಷರೆ, ಇವತ್ತು ಬಹಳ ಅನಿವಾರ್ಯವೆಂದು ಅದರಲ್ಲಿಯೂ ಸಹ ಬಜೆಟ್ ಮೇಲೆ ಭಾಷಣ ಇರುವುದರಿಂದ ಮೊದಲನೆಯ ಸಾಲಿನಲ್ಲಿ ಮಾನ್ಯ ಉಪ ಮುಖ್ಯ ಮಂತ್ರಿಗಳು ಬಂದು ಕುಳಿತಿದ್ದಾರೆ. ಅವರನ್ನು ಬಿಟ್ಟರೆ ಯಾರೂ ಮಂತ್ರಿಗಳೇ ಇಲ್ಲ. ಅವರು ಇರಲಿಲ್ಲ ಎಂದರೆ ಮೊದಲನೆಯ ಸಾಲು ಪೂರ್ಣ ಖಾಲಿಯಾಗಿಯೇ ಇರುತ್ತಿತ್ತು.

ಅಧ್ಯಕ್ಷರು:- ಮಂತ್ರಿಗಳ ಪ್ರಶ್ನೆಯಲ್ಲ. ಜನರಲ್ ಆಗಿ ಸದಸ್ಯರುಗಳೇ ಸದನಕ್ಕೆ ಬರುವುದಿಲ್ಲ. ಆಡಳಿತ ಪಕ್ಷದ ಕಡೆಯಾಗಲಿ, ವಿರೋಧ ಪಕ್ಷದ ಕಡೆಯಾಗಲಿ ಯಾರಿಗೂ ಸದನದ ಕಾರ್ಯಕಲಾಪಗಳಲ್ಲಿ ಆಸಕ್ತಿಯೇ ಇಲ್ಲ. ಯಾರಿಗಾಗಿ ಇಷ್ಟೆಲ್ಲಾ ಹಣವನ್ನು ಖರ್ಚು ಮಾಡಬೇಕೆನ್ನುವುದೇ ಗೊತ್ತಿಲ್ಲ. ಇಡೀ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಬಂದಿರತಕ್ಕಂತಹ ಖಾಯಿಲೆ ಇದು, ವ್ಯಸನವಾಗತಕ್ಕಂಥದ್ದು. ಆರಿಸಿ ಬರತಕ್ಕಂಥದು ಸದನಕ್ಕೆ ಬರಬೇಕೆಂದು ಆಲೋಚನೆಯನ್ನೇ ಮಾಡುವುದಿಲ್ಲ. ಮಾನ್ಯ ದೇಶಪಾಂಡೆಯವರೆ, ಈಗ ಮಾನ್ಯ ಸುರೇಶ್ ಕುಮಾರ್ ರವರಿಂದ ಭಾಷಣ ಪ್ರಾರಂಭ ಮಾಡಿಸಲಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಾವು ಮತ್ತು ಅವರು ಮಾತನಾಡಲೇಬೇಕೆಂದು ಬಂದಿದ್ದೇವೆ. ಆಡಳಿತದ ಪಕ್ಷದ ಕಡೆಯಲ್ಲಿ ಸದಸ್ಯರುಗಳಿಲ್ಲ, ಮಂತ್ರಿಗಳು ಸದನದಲ್ಲಿಲ್ಲ ಎಂದು ಹೇಳಿ ಬಹುಶಃ ನಿಧಾನ ಮಾಡುತ್ತಿದ್ದೀರೇನೋ ಅಂದು ಕೊಂಡೆ.

ಅಧ್ಯಕ್ಷರು:- ತಾವು ಶ್ರೀ ದೇಶಪಾಂಡೆಯವರ ಜೊತೆಯಲ್ಲಿ ಮಾತನಾಡುತ್ತಿರುವುದರಿಂದ ತಮಗೆ ಏನಾದರೂ ಡಿಸ್ಟರ್ಬ್ ಆಗುತ್ತದೆಯೋ ಎಂದು ಕೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಮಗೆ ಯಾವ ಡಿಸ್ಟರ್ಬ್ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು ವಿರೋಧ ಪಕ್ಷದ ಕಡೆಯಲ್ಲಿ ನಿಂತುಕೊಂಡು ಮಾತನಾಡುತ್ತಾರೆ. ಎಲ್ಲಿ ಅಂದರೆ ಅಲ್ಲಿ ನಿಂತುಕೊಂಡು ಮಾತನಾಡುತ್ತಾರೆ.

ಅಧ್ಯಕ್ಷರು :- ಈಗ ಫ್ರೀಸ್ಟೈಲ್ ಅವರದ್ದು.

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ) :- ಸನ್ಮಾನ್ಯ ಅಧ್ಯಕ್ಷರೆ, ಒಂದು ವಿಶಿಷ್ಟವಾದ ಸನ್ನಿವೇಶದಲ್ಲಿ ನಮ್ಮ ರಾಜ್ಯದ 1998-99 ನೇ ಸಾಲಿನ ಆಯವ್ಯಯದ ಚರ್ಚೆಯಲ್ಲಿ ನಾವು ತೊಡಗಿದ್ದೇವೆ. ತಾವು ಆಯವ್ಯಯ ಭಾಷಣದಲ್ಲಿ ಹೇಳಿರುವ ಹಾಗೆ ಇತ್ತೀಚೆಗೆ 12 ನೇ ಲೋಕಸಭಾ ಚುನಾವಣೆಯು ಆಯಿತು, ಒಂದು ರೀತಿ ದೇಶದಲ್ಲಿ ರಾಜಕೀಯದ ವಿಕಾರತೆ ಎಂದು ಕರೆಯಬಹುದಾದ, ರಾಜಕೀಯ ಅಸಹನೆ, ಸಂವಿಧಾನದಲ್ಲಿ ಅಸ್ಪೃಶ್ಯತೆಯನ್ನು ತಪ್ಪು ಎಂದು ಹೇಳಿದರೂ ಕೂಡ ಅಸ್ಪೃಶ್ಯತೆ ದೂರವಾದರೂ ಕೂಡ ರಾಜಕೀಯ ಈ ಅಸ್ಪೃಶ್ಯತೆ, ರಾಜಕಿಯ ದ್ವೇಷ ಇವು ವಿಜೃಂಭಿಸುತ್ತಿರುವಾಗ ಇವತ್ತು ದೇಶವನ್ನು ಭಾದಿಸುತ್ತಿರುವ ಅನೇಕ ಕಷ್ಟಗಳಿಗೆ ಪರಿಹಾರವನ್ನು ಕೊಡುವುದಕ್ಕೋಸ್ಕರವಾಗಿ ಒಂದು ಹೊಸ ರಾಜಕೀಯ ವ್ಯವಸ್ಥೆ ಕೇಂದ್ರದಲ್ಲಿ ಮೂಡಿ ಬಂದಿದೆ. ಪ್ರಾಯಶ: ಅಸಹನೆಗಿಂತ ರಾಜಕಿಯ ಸಾಮರಸ್ಯ ಇವತ್ತು ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂಬ ಒಂದು ಪ್ರಾಮಾಣಿಕ ಚಿಂತನೆ ಇವತ್ತು ಕೇಂದ್ರದಲ್ಲಿ ಮೂಡಿ ಬರುತ್ತಿರುವಂತಹ ಸಂದರ್ಭದಲ್ಲಿ ನಾವು ನಮ್ಮ ರಾಜ್ಯದ ಈ ಆಯವ್ಯಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ತೊಡಗಿದ್ದೀವೆ. ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ದರಾಮಯ್ಯನವರು 18ನೇ ತಾರಿಖು ಈ ಸದನದಲ್ಲಿ ಆಯವ್ಯಯ ಭಾಷಣವನ್ನು ಮಾಡಿದಾಗ ನಾನು ಬಹಳ ಉತ್ಸಾಹದಿಂದ ಈ ಸದನಕ್ಕೆ ಬಂದಿದ್ದೆ. ಶ್ರೀ ಸಿದ್ದರಾಮಯ್ಯನವರ ನಾಲ್ಕನೇ ಭಾಷಣ ಇದು. ಈ ನಾಲ್ಕು ವರ್ಷದ ಆಡಳಿತದ ಅನುಭವದ ವಿಚಾರಗಳು ಈ ಭಾಷಣದಲ್ಲಿ ಇರುತ್ತದೆ. ಇಡೀ ರಾಜ್ಯಕ್ಕೆ ಬೆಳಕು ಕಾಣುತ್ತದೆ, ಪ್ರಕಾಶ ಕಾಣುತ್ತದೆ ಎಂದು ಉತ್ಸಾಹದಿಂದ ಬಂದೆ. ಆದರೆ ಅವತ್ತು ಈ ಸದನದ ಸಭಾಂಗಣದಲ್ಲಿ ಬೆಳಕು ಇತ್ತು, ಆದರೆ ಆ ಬೆಳಕು ಅವರ ಭಾಷಣದ್ದಲ್ಲ. ದೂರದರ್ಶನದವರು ನೇರ ಪ್ರಸಾರ ಮಾಡಬೇಕೆಂದು ಫ್ಲಾಷ್ ಲೈಟ್ ಹಾಕಿದ್ದರು. ಆ ಬೆಳಕನ್ನೇ ನಾನು ಜಾಸ್ತಿ ಕಂಡಿದ್ದು. ಆ ಬೆಳಕಿನ ಮೂಲಕ ಬಜೆಟ್ ಭಾಷಣದಿಂದ ರಾಜ್ಯದ ಜನತೆಗೆ ಹುಮ್ಮಸ್ಸು ಕೊಡುವ ಅಂಶಗಳನ್ನು ಹುಡುಕಲಿಕ್ಕೆ ಪ್ರಾಮಾಣಿಕ ಪ್ರಯತ್ನ ಪಟ್ಟರೂ ಕೂಡ ನಾನು ಅದರಲ್ಲಿ ವಿಫಲನಾದೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿದರೆ ನಿಮಗೆ ಕಣ್ಣು ಇಲ್ಲ, ಕಿವಿ ಇಲ್ಲ ಅದು ಗೋಚರಿಸುವುದಿಲ್ಲವೆಂದು ಹೇಳುತ್ತಿದ್ದರೋ ಏನೋ. ನನ್ನ ಪ್ರಾಮಾಣಿಕ ಪ್ರಯತ್ನ ಅದರಲ್ಲಿ ಯಶಸ್ಸು ಆಗಲಿಲ್ಲ. ನನಗೆ ಶ್ರೀ ಸಿದ್ದರಾಮಯ್ಯನವರ ಬಗ್ಗೆ ಬಹಳ ವಿಶ್ವಾಸ ಇದ್ದು ಒಬ್ಬ ಛಲದ ವ್ಯಕ್ತಿ, ಹುಮ್ಮಸ್ಸು ಇಟ್ಟುಕೊಂಡಿರತಕ್ಕಂತಹ ವ್ಯಕ್ತಿ ಅವರು ಏನಾದರೂ ಒಂದು ಈ ಬಜೆಟ್ ಮೂಲಕ ರಾಜ್ಯಕ್ಕೆ ವಿಶ್ವಾಸ ತೋರುತ್ತಾರೆಂದು ಭಾವಿಸಿದ್ದೆ. ಪ್ರಾಯಶ: ನಾಲ್ಕನೆಯ ವರ್ಷಕ್ಕೆ ಅವರು ಬಹಳ ಸುಸ್ತು ಆಗಿರಬೇಕು. ಅಥವಾ ಆಡಳಿತ ಪಕ್ಷದ ಈ ರಾಜಕೀಯ ಚಟುವಟಿಕೆಯಿಂದ ಜರ್ಜರಿತರಾಗಿರಬೇಕು. ಅದಕ್ಕೋಸ್ಕರ he has produced one more xerox copy of the three previous Budgets. ಈ ಬಜೆಟ್‌ನಲ್ಲಿ ಯಾವುದೇ ನವಿನತೆಯನ್ನು ನಾನು ಕಾಣುತ್ತಿಲ್ಲ. ಆ ಜನತೆಯ ಋಣವನ್ನು ತೀರಿಸುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ನಾವು ಕಾಣುತ್ತಿಲ್ಲ ಜೊತೆ ಜೊತೆಗೆ ನಮ್ಮ ಆದಾಯವನ್ನು ಜಾಸ್ತಿ ಮಾಡಿಕೊಂಡು ನಮ್ಮ ಖರ್ಚನ್ನು ಸರಿದೂಗಿಸಬೇಕು ಎನ್ನುವ ಜಾಣ್ಮೆ ಕೂಡ ಇವತ್ತು ಕಾಣುತ್ತಿಲ್ಲ. ಏನೋ ಮಾರ್ಚ್ ತಿಂಗಳು ಬಂದಿದೆ ಮಾಡಬೇಕು, ಮಾಡಲೇಬೇಕಾದ ಒಂದು ಯಾಂತ್ರಿಕೃತ ಕ್ರಿಯೆಯನ್ನು ಈ ಬಜೆಟ್ ಮೂಲಕ ನೋಡುತ್ತಿದ್ದೇವೆ. ಒಂದು ನಾನು ತಿಳಿದಿರುವ ಪ್ರಕಾರ ಬಜೆಟ್ ಕೇವಲ ಅಂಕಿ ಅಂಶಗಳ ಒಂದು ದೊಂಬರಾಟವಾಗಬಾರದು. It should be a blue print. ನಾನು ಹಿಂದಿನ ವರ್ಷ ಏನು ಸಾಧನೆ ಮಾಡಿದ್ದೇನೆ, ಮುಂದಿನ ವರ್ಷ ನಾನು ಏನು

ಮಾಡುತ್ತೇನೆ ಎನ್ನುವ ಹುಮ್ಮಸ್ಸು ಈ ಬಜೆಟ್‌ನಿಂದ ಕಾಣುತ್ತಿಲ್ಲ. ಆದರೆ ತಾವು ಅನೇಕ ಅಂಶಗಳನ್ನು ಹೇಳಿದ್ದೀರಿ, ಹೇಳುವಾಗ ನಿಮಗೆ ಅದರ ಬಗ್ಗೆ ವಿಶ್ವಾಸ ಇಲ್ಲದೇ ಇರುವಂಥಾದ್ದನ್ನು ಈ ಬಜೆಟ್‌ನಲ್ಲಿ ಕಾಣುತ್ತೇವೆ. ನಾನು 1994ನೇ ಇಸವಿಯಲ್ಲಿ ಶ್ರೀ ಸಿದ್ದರಾಮಯ್ಯನವರ ಈ ಬಜೆಟ್ ಯಾತ್ರೆ ಪ್ರಾರಂಭವಾಯಿತು. 1994ನೇ ಇಸವಿನಿಂದ ನಾನು ನೋಡಿಕೊಂಡು ಬಂದೆ. ಈ ಕೊರತೆಯ ಬಜೆಟ್‌ನ್ನು ಕೊಡುವುದರಲ್ಲಿ ಅವರಿಗೆ ಏನೋ ಆನಂದ. Karnataka beking the highest tax paid State... ಇಷ್ಟೆಲ್ಲಾ ಟ್ಯಾಕ್ಸ್ ತೆಗೆದುಕೊಂಡರೂ ಕೂಡ ಕೊರತೆಯನ್ನು ಮಾಡುವುದೇ ಒಂದು ಪದ್ಧತಿಯನ್ನು ಮಾಡಿಕೊಂಡು ಬಂದುಬಿಟ್ಟರೆ ಅದು ಯಾವ ಬಜೆಟ್ ಮೂಲಕ ನ್ಯಾಯ ದೊರಕಿಸುವುದು ಎನ್ನುವುದೇ ನನಗೆ ಗೊತ್ತಾಗುತ್ತಿಲ್ಲ. 1994-95 ರಲ್ಲಿ ರಿವೈಜ್ಡ್ ಎಸ್ಟಿಮೇಟ್‌ನಲ್ಲಿ ಓವರ್ ಆಲ್ ಡೆಪಿಸಿಟ್ ತೋರಿಸಿದ್ದು 76.22 ಕೋಟಿ ರೂಪಾಯಿಗಳು. ಆಗ ತಾವು ಏನು ಹೇಳಿದ್ದೀರಿ ಎಂದರೆ ಪರಿಸ್ಥಿತಿ ಸುಧಾರಣೆಯಾಗಬೇಕು, ಈ ವರ್ಷವೇ ನಾವು ಅಧಿಕಾರಕ್ಕೆ ಬಂದಿದ್ದೇವೆ, ಆದಾಯವನ್ನು ಹೆಚ್ಚಿಸಿಕೊಳ್ಳುತ್ತೇವೆಂದು. 1995-96 ರಲ್ಲಿ 79.50 ಕೋಟಿ ರುಪಾಯಿಗಳು ಓವರ್ ಆಲ್ ಡಿಪಿಸಿಟ್, 1996-97 ರಲ್ಲಿ 98.97 ರಲ್ಲಿ 98.94 ಕೋಟಿ ರೂಪಾಯಿಗಳು. 1997-98 ರಲ್ಲಿ ರಿವೈಜ್ಡ್‌ನ್ನು ಹೇಳುತ್ತಿರುವುದು ಸೆಂಚ್ಯುರಿಯನ್ನು ದಾಟಿದ್ರಿ; ಅಂದರೆ 104.30 ಕೋಟಿ ರೂಪಾಯಿಗಳು. ಇವತ್ತು ನೀವು ಇಟ್ಟಿರುವ ಆಯವ್ಯಯದಲ್ಲಿ ತಾವೇ ತೋರಿಸಿದ ಪ್ರಕಾರ ಡೆಪಿಸಿಟ್. ಕಳೆದ ಬಾರಿ 104 ಕೋಟಿ ರೂಪಾಯಿಗಳಾದರೆ ಏನು ಈ ಸಲ ಅದರ ಡಬಲ್ ಮಾಡಬೇಕೆಂದು 196.62 ಕೋಟಿ ರೂಪಾಯಿಗಳ ಕೊರತೆಯನ್ನು ತೋರಿಸಿದ್ದೀರಿ. ನನಗೆ ತಿಳಿದಿರುವ ಹಾಗೆ ಅಲ್ಪಸ್ವಲ್ಪ ಇಕಾನಾಮಿಕ್ ಮೂಲಕ ಹೇಳುವುದಾದರೆ ಅದರಲ್ಲಿ ಕ್ಯಾಪಿಟಲ್ ಡೆಫಿಸಿಟ್. ನಿಮ್ಮ ಖರ್ಚನ್ನು ಸಮತೋಲನವನ್ನು ಮಾಡುವುದಕೋಸ್ಕರವಾಗಿ ನೀವು ಸಾಲವನ್ನು ತಂದಿದ್ದರಲ್ಲಿ ಆ ಯೋಜನೇತರ, ಅಭಿವೃದ್ಧಿಯೇತರ ಕಾರ್ಯಕ್ರಮಕ್ಕೆ ಖರ್ಚು ಮಾಡುತ್ತಿರುವಂಥದ್ದು ಯಾವ ಧೈರ್ಯ ಕೊಡುತ್ತಿದೆ? ಈ ಸಂದರ್ಭದಲ್ಲಿ ಗಾಭರಿಯಾದ ಇನ್ನೊಂದು ಅಂಶ ಎಂದರೆ ಪ್ರಾಯಶಃ ಅದನ್ನು ಈ ಬಜೆಟ್ ಭಾಷಣದಲ್ಲಿ ತೋರಿಸಿಲ್ಲ. 1994-95 ರಲ್ಲಿ ತಾವು ಅಧಿಕಾರಕ್ಕೆ ಬಂದ ಸಮಯದಲ್ಲಿ 31.3.1994, ಒಟ್ಟು ಸಾಲ ಕೊಡಬೇಕಾದುದು 9,124 ಕೋಟಿ ರೂಪಾಯಿಗಳು. ಇವತ್ತು ನಾಲ್ಕು ವರ್ಷಗಳಾದ ಮೇಲೆ 1998-99 ಕ್ಕೆ ನಮ್ಮ ಒಟ್ಟು ಲೈಯಾಬಿಲಿಟಿ ಆಗುವುದು 17,214 ಕೋಟಿ ರೂಪಾಯಿಗಳು. ಹಾಗೆ ಲೆಕ್ಕಾಚಾರವನ್ನು ಹಾಕಿದಾಗ ಇಂಟರೆಸ್ಟ್ ಲೈಯಬಿಲಿಟಿ ನಮ್ಮ ರಾಜ್ಯಕ್ಕೆ ಬರುತ್ತಾ ಇರುವುದು 1,679.23 ಕೋಟಿ ರೂಪಾಯಿಗಳು. ಇದನ್ನು ಯಾರಾದರೂ ಕೂಡ ಬಜೆಟ್ ಎಂದು ಹೇಳುತ್ತಾರಾ? ಬ್ಲೂ ಪ್ರಿಂಟ್ ಎಂದು ಹೇಳುತ್ತಾರಾ ಅಥವಾ ಹಾಸಿಗೆ ಇದ್ದಷ್ಟು ಕಾಲು ಚಾಚುತ್ತೇವೆಂದು ಹೇಳುತ್ತಾರೆ, ಇದನ್ನು ಸ್ವಲ್ಪ ವಿಶ್ಲೇಷಣೆ ಮಾಡುತ್ತಾ ಹೋದರೆ ಇಷ್ಟೆಲ್ಲಾ ಮಾಡಿದರೂ ಕೂಡ ಪ್ರಗತಿಯನ್ನು ಏನಾದರೂ ತೋರಿಸಿದ್ದೀರಾ? ಇವತ್ತು ನಮ್ಮ ರಾಜ್ಯವನ್ನು ಬಾಧಿಸುತ್ತಿರುವಂಥದ್ದು ಎರಡು ಅಂಶಗಳು ಇಲ್ಲಿ ಕಂಡು ಬರುವುದು. ನಾನು ತುಂಬಾ ಅಂಕಿ ಅಂಶಗಳಿಗೆ ಹೋಗುವುದಿಲ್ಲ, ಏಕೆಂದರೆ ಹಿರಿಯ ಸದಸ್ಯರಾದ ಪ್ರತಿಪಕ್ಷದ ನಾಯಕರಾದಂತಹ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಸಾಕಷ್ಟು ಅಂಕಿ ಅಂಶಗಳ ಬಗ್ಗೆ, ಅವರು ಅನುಭವದ ಮಾತುಗಳನ್ನು ಸಹ ಹೇಳಿದ್ದಾರೆ. ಆದುದರಿಂದ ಅವರ ಜೊತೆಗೆ ನಾನು ಧ್ವನಿಯನ್ನು ಸೇರಿಸುತ್ತಾ 4-5 ಅಂಶಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟ ಪಡುತ್ತೇನೆ. 10 ವರ್ಷಗಳ ಹಿಂದೆ ನಮ್ಮ ರಾಜ್ಯದ ಆಯವ್ಯಯದಲ್ಲಿ ವಿದ್ಯುತ್ ಕ್ಷೇತ್ರಕ್ಕೆ ಇಟ್ಟ ಹಣ ಆಯವ್ಯಯದ ಶೇಕಡ 24 ರಷ್ಟು 24 percent of the Budget was for energy sector. ಇವತ್ತು ನಮಗೆ ಗೊತ್ತಿರುವ ಹಾಗೆ ಇಡೀ

ರಾಜ್ಯದಲ್ಲಿ ವಿದ್ಯುತ್ ಬರವನ್ನೂ ನಾವು ಅನುಭವಿಸುತ್ತಿದ್ದೇವೆ. ರೈತರಿಗೆ ವಿದ್ಯುತ್ ಇಲ್ಲ, ಸಾಮಾನ್ಯ ಜನತೆಗೆ ವಿದ್ಯುತ್ ಇಲ್ಲ, ಉದ್ದಿಮೆದಾರರಿಗೆ ವಿದ್ಯುತ್ ಇಲ್ಲ, ಹೊರ ರಾಜ್ಯಗಳಿಂದ ಇಲ್ಲಿ ಬಂದು ಬಂಡವಾಳವನ್ನು ಹೂಡುವವರಿಗೆ ವಿದ್ಯುತ್ ಇಲ್ಲ. ರತನ್ ಟಾಟಾರವರು ಹೇಳಿದರೆ ಅದು ಸುಳ್ಳು ಎಂದು ಅನ್ನಿಸುತ್ತದೆ. ರತನ್ ಟಾಟಾರವರ ಹೇಳಿಕೆ ಸುಳ್ಳು ಎಂದು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಹೇಳಿದರು. Was he really lieing? - ನಮ್ಮ ರಾಜ್ಯದಲ್ಲಿ ಮಾಡಬೇಕಾದ ಉದ್ಯಮಗಳು ಹೈದರಾಬಾದ್‌ಗೆ ಹೋಗುತ್ತಿಲ್ವಾ ಇಲ್ಲಿ ಏನು ಬಂಡವಾಳವನ್ನು ಹೂಡಬೇಕೆಂದುಕಾದ ಬಂಡವಾಳವನ್ನು ಪಕ್ಕದ ಆಂಧ್ರ ಪ್ರದೇಶದವರು ತೆಗೆದುಕೊಂಡು ಹೋಗುತ್ತಿಲ್ವಾ? ಇದು ಒಂದಾದರೆ, ಇನ್ನು ಎರಡನೆಯದು ನೀರಾವರಿ. ನಾವು ಇವತ್ತು ಎಲ್ಲಾ ವೇದಿಕೆಗಳಿಂದ ಕೇಳುತ್ತಿದ್ದೇವೆ, ನೀರಾವರಿ ಯೋಜನೆಗಳಿಗೆ 5 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು, ಮಾಡುತ್ತೇವೆ ಎಂದು. ಈ ಸಾರಿ ಖರ್ಚು ಮಾಡುತ್ತಿರುವುದು 1600 ಕೋಟಿ ರೂಪಾಯಿಗಳು. ಅದರಲ್ಲಿ ನೀವು ಹೇಳಿರುವ ಪ್ರಕಾರ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಬಾಂಡ್‌ನಿಂದ ಕೊಡುತ್ತಿದ್ದೀರಿ. ಹೋಗಲಿ, ವಿದ್ಯುತ್ ಬೇಡ, ನೀರಾವರಿ ಬೇಡ, ನೀವು ಬಡವರ ಬಂಧುಗಳು, ಹಿಂದುಳಿದವರ ಛಾಂಪಿಯನ್‌ಗಳು, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಕಣ್ಣೀರು ಸುರಿಸುವವರು. ಅದರ ಬಗ್ಗೆ ನಿಮ್ಮ ಆಯವ್ಯಯದಲ್ಲಿ ಏನಿದೆ? ಕಳೆದ ವರ್ಷದ ಆಯುವ್ಯಯದಲ್ಲಿ ಗ್ರಾಮೀಣಾಭಿವೃದ್ಧಿಗೆ ಇಟ್ಟಹಣ 255 ಕೋಟಿ ರೂಪಾಯಿಗಳು. ಇವತ್ತ ಹಣದುಬ್ಬರ, ಇನ್‌ಫ್ಲೇಷನ್, ಮನಿ ವ್ಯಾಲ್ಯು, ರುಪಿ ವ್ಯಾಲ್ಯು, ಎಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡರೂ ಕೂಡ ಇವತ್ತು ಇಟ್ಟಿರುವುದು 253.40 ಕೋಟಿ ರೂಪಾಯಿಗಳು. ಇದರಿಂದ ಗ್ರಾಮೀಣ ಅಭಿವೃದ್ಧಿ ಆಗುತ್ತದೆಯೆ? ಇನ್ನು ವಸತಿ. ನಾವು 1,55,000 ನಿವೇಶನಗಳನ್ನು ಕೊಡುತ್ತೇವೆ. ಮನೆ ಕಟ್ಟಿಸಿಕೊಡುತ್ತೇವೆಂದು ಹೇಳಿ ಹೋದ ಸಾರಿ ಇಟ್ಟ ಹಣ 357ಕೋಟಿ ರೂಪಾಯಿಗಳು. ಈ ಸಾರಿ ಇಟ್ಟಿರುವುದು 330 ಕೋಟಿ ರೂಪಾಯಿಗಳು. ಇನ್ನು ಆರೋಗ್ಯ. ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೆ ಆರೋಗ್ಯ ಕೊಡುತ್ತೇವೆಂದು ಹೇಳತಕ್ಕ ಸ್ಲೋಗನ್‌ನಲ್ಲಿ ಇರುವಷ್ಟು ಒತ್ತು ಆಯವ್ಯಯದಲ್ಲಿ ಕಾಣುತ್ತಿದೆಯೆ? ಆರೋಗ್ಯಕ್ಕೆ ಹೋದ ಸಾರಿ 200 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ ಈ ಸಾರಿ ಇಟ್ಟಿರುವುದು 195 ಕೋಟಿ ರೂಪಾಯಿಗಳು ಮಾತ್ರ. ಹೀಗೆ ಯಾವುದೇ ರೀತಿಯಲ್ಲಿ ನಿಮ್ಮ ಕಳಕಳಿ, ಆದ್ಯತೆ ತೋರಿಸುವುದರಲ್ಲಿ ವಿಫಲರಾಗಿದ್ದೀರಿ. ಹೋದ ಸಾರಿ ಮಾನ್ಯ ಸಿದ್ದರಾಮಯ್ಯನವರು ಭಾಷಣ ಮಾಡುತ್ತಾ, ನಾವು 150 ಕೋಟಿ ರೂಪಾಯಿಗಳ ಸರ್ಚಾರ್ಜ್ ತೆಗೆದು ಹಾಕಿದ್ದೇವೆ, ಸರ್ಚಾರ್ಜ್ ರದ್ದು ಮಾಡಿದ್ದೇವೆಂದು ಹೇಳಿದಾಗ ಆ ಕಡೆಕುಳಿತಿದ್ದವರು (ಪ್ರಾರಂಭದ ದಿವಸ ತುಂಬಾ ಜನರು ಇರುತ್ತಾರೆ) ಜೋರಾಗಿ ಚಪ್ಪಾಳೆ ತಟ್ಟಿದರು. ಆದರೆ ಈ ಸಾರಿ ಏನು ಮಾಡಿದ್ದೀರಿ? ಇನ್ಫ್ರಾಸ್ಟ್ರಕ್ಚರ್ ಎಂದು ಇಡೀ ದೇಶದಲ್ಲಿ ಕೇಳಿಲ್ಲ, ಕಂಡಿಲ್ಲ; ಇವತ್ತು 150 ಕೋಟಿ ರೂಪಾಯಿಗಳನ್ನು ದೋಚುತ್ತಿದ್ದಾರೆ. ಅದರಲ್ಲಿ ಬಹಳ ಸ್ವಾರಸ್ಯ ಅನ್ನಿಸಿದ್ದು ಅಂದರೆ ಈ ಕರವನ್ನು ಇಡೀ ರಾಜ್ಯಕ್ಕೆ ಎರಡು ವರ್ಷಗಳ ಅವಧಿಗೆ ಮಾತ್ರ ವಿಧಿಸಲು ಉದ್ದೇಶಿಸಿದ್ದೇವೆಂದು ಹೇಳಿರುವುದು. ಇವರು ಆಡಳಿತದಲ್ಲಿ ಎಷ್ಟು ಕಾಲ ಇರುತ್ತಾರೆ? ಎರಡು ವರ್ಷಗಳ ಕಾಲ ಮಾತ್ರ ವಿಧಿಸುತ್ತೇವೆ ಅನ್ನುತ್ತಾರೆ. ಈ ಸಂದರ್ಭದಲ್ಲಿ ನೆನಪಿಗೆ ಬಂದದ್ದು, ಉಡುಪಿಯಲ್ಲಿ ಶ್ರೀ ಕೃಷ್ಣನ ದೇವಸ್ಥಾನ ಇದೆ. ಯಾರೋ ಒಬ್ಬರು ಪ್ರದಕ್ಷಿಣೆ ಹಾಕುತ್ತಿದ್ದಾರಂತೆ. ಅವರ ಸ್ನೇಹಿತರು ಬಂದರು, ಓ, ಭಟ್ಟರೆ, ಹೇಗಿದ್ದೀರಾ ಅಂದರು. ಅದಕ್ಕೆ ಅವರು ಬಹಳ ಸ್ವಾರಸ್ಯಕರವಾಗಿ ಮಾನ್ಯ ಸಿದ್ದರಾಮಯ್ಯನವರ ತರಹ ಉತ್ತರ ಕೊಟ್ಟರಂತೆ. ಕೃಷ್ಣ ಇರುವವರೆಗೆ ನನ್ನ ಬಾಳು ಚೆನ್ನಾಗಿದೆದದದ್‌ದ್", ಕೃಷ್ಣ ಹೋದಮೇಲೆ ನೋಡೋಣ ಅಂದರಂತೆ. ಕೃಷ್ಣ ಹೋದಮೇಲೂ

ಬದುಕುತ್ತೇನೆಂಬ ವಿಶ್ವಾಸ ಆತನಿಗೆ. ಎರಡು ವರ್ಷಗಳ ಕಾಲ ಮಾತ್ರ ಕರ ವಿಧಿಸುತ್ತೇವೆಂಬ ಹೇಳಿಕೆಯನ್ನೀ ಭಾಷಣದಲ್ಲಿ ಹೇಳುತ್ತಾರೆ. ಆಮೇಲೆ ತೆರಿಗೆ ಸಂಗ್ರಹ ಮಾಡುವುದರಲ್ಲಿ ಕಳೆದ ಸಾರಿ ಭಾಷಣ ಹೇಳುತ್ತಾರೆ. ಆಮೇಲೆ ತೆರಿಗೆ ಸಂಗ್ರಹ ಮಾಡುವುದರಲ್ಲಿ ಕಳೆದ ಸಾರಿ ಭಾಷಣ ಮಾಡುತ್ತಾ ಬಹಳ ಜೋರಾಗಿ ಹೇಳಿದ್ದೀರಿ " I would like to asure the Members of the House that Government will not spare any efforts to make this anticipated deficit by stricter enforcement of taxation measure and elimination of unproductive expenditure during the year." ಇದು ಆಯಿತೇ? ನೀವೇ ಹೇಳಿದ ಪ್ರಕಾರ ನಿಮಗೆ ಮಾರಾಟ ತೆರಿಗೆಯನ್ನು ಸಂಗ್ರಹ ಮಾಡುವುದಕ್ಕಾಗಿಲ್ಲ. ನೀವು ಹೇಳುತ್ತೀರಿ, ಇಂಡಸ್ಟ್ರೀಯಲ್ ರೆಸೆಷನ್ ಇತ್ತು ಎಂದು. ಕಮರ್ಷಿಯಲ್ ಟ್ಯಾಕ್ಸ್ ಕಲೆಕ್ಟ್ ಮಾಡುವುದಕ್ಕೆ ಇಂಡಸ್ಟ್ರೀಯಲ್ ರೆಸೆಷನ್ ಇದ್ದರೆ ಕಮರ್ಷಿಯಲ್ ಟ್ಯಾಕ್ಸ್ ಆಫೀಸ್‌ನಲ್ಲಿ ಕರಪ್ಷನ್‌ಗೆ ರೆಸೆಷನ್ ಇಲ್ಲವೆ? ಕರಪ್ಷನ್ ಆಗುವುದು ಮಾತ್ರ ಆಗುತ್ತಿತ್ತು, ಇವರು ಕಲೆಕ್ಟ್ ಮಾಡುವುದಕ್ಕೆ ಮಾತ್ರ ರೆಸೆಷನ್. ಅದೇ ರೀತಿ ಎಕ್ಸೈಜ್. ಎಕ್ಸೈಜ್‌ನಲ್ಲಿ ಕೂಡ 75 ಕೋಟಿ ರೂಪಾಯಿ ಇವತ್ತು ಕಡಿಮೆ ಕಲೆಕ್ಟ್ ಮಾಡುತ್ತಿದ್ದೀರಿ. ಇದನ್ನು ನಾನು ನೀವೇ ಕೊಟ್ಟ ಅಂಕಿ ಅಂಶಗಳ ಪ್ರಕಾರ ಹೇಳುತ್ತಿದ್ದೇನೆ. ಜೊತೆಗೆ ಕಳೆದ ವರ್ಷ ವಿದ್ಯುತ್ ದರ ಏರಿಕೆ ಮೂಲಕ 1200 ಕೋಟಿ ರುಪಾಯಿಗಳನ್ನು ಕರ್ನಾಟಕದ ಗ್ರಾಹಕರ ಮೂಲಕ ಜಾಸ್ತಿ ತೆಗೆದುಕೊಂಡಿದಿರಿ. ಇಷ್ಟೆಲ್ಲಾ ಸರ್ಕಸ್ ಮಾಡಿದರೂ ಇವತ್ತು ನೀವು ಮಂಡಿಸಿರತಕ್ಕದ್ದು ಕೊರತೆಯ ಆಯವ್ಯಯವಾಗಿದೆ. ಇದನ್ನು ಯಾರಾದರೂ ಜಾಣ್ಮೆಯಿಂದ ಕೂಡಿದ ಲೆಕ್ಕಾಚಾರ, ಜನತೆಗೆ ವಿಶ್ವಾಸ ಕೊಡುವ ಆಯವ್ಯಯ ಎಂದು ಹೇಳುತ್ತಾರೆಯೆ? ನನಗನ್ನಿಸುವುದು ಏನೆಂದರೆ, ಸ್ಟ್ಯಾಟಿಸ್ಟಿಕ್ ಬಗ್ಗೆ ಒಂದು ಕೊಟೇಷನ್ ನೋಡುತ್ತಿದ್ದೆ. ಒಂದು ಇನ್‌ಡೀಸೆಂಟ್ ಕೊಟೇಷನ್. ಅದನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅದರಲ್ಲಿ ರಿವೀಲಿಂಗ್, ಕನ್ಸೀಲಿಂಗ್ ಎಲ್ಲಾ ಹೇಳುತ್ತಾರೆ. some people use statistics like drunken man who uses a lamp-post.. ಕುಡುಕರು ಲ್ಯಾಂಪ್-ಪೋಸ್ಟ್ ಏತಕ್ಕೆ ಉಪಯೋಗಿಸುತ್ತಾರೆ? for support rather than for illumination,... ಅದರಿಂದ ಅವರಿಗೆ ಬೆಳಕು ಸಿಗುವುದಿಲ್ಲ, ಅದರ ಸಪೋರ್ಟ್‌ನಿಂದ ನಿಲ್ಲುತ್ತಾರೆ. ನಮ್ಮ ರಾಜ್ಯದ ಸ್ಟ್ಯಾಟಿಸ್ಟಿಕ್ಸ್ ಕೂಡ ಸಪೋರ್ಟ್‌ಗೋಸ್ಕರ ಉಪಯೋಗಿಸುವುದು ಆಗುತ್ತಿದೆಯೇ ಹೊರತು ಜನತೆಗೆ ವಿಶ್ವಾಸ ಕೊಡುವ ಸ್ಟ್ಯಾಟಿಸ್ಟಿಕ್ಸ್ ನಮ್ಮ ಮುಂದೆ ಇಡುತ್ತಿಲ್ಲ. ತಾವು ಹೇಳಿದ್ದೀರಿ, ಈಗಿರುವ ಶೇಕಡ 12 ಮತ್ತು 8 ರ ಕರಗಳನ್ನು ಶೇಕಡ 10ಕ್ಕೆ ಸರಿದೂಗಿಸುತ್ತೇವೆ ಎಂದು. ಇದನ್ನು ಸರಳೀಕರಣ ಎಂದು ಇವರು ಕರೆದರೆ ಪ್ರಾಯಶಃ the Deputy Chief Minister and Hon'ble Finance Minister thinks that we are all simpleton.... ನಾವೆಲ್ಲಾ ಬಹಳ ದಡ್ಡರು, ಮುಗ್ದರು ಎಂದು ತಿಳಿದುಕೊಂಡಿದ್ದಾರೆ. 8- 10 ಇರುವುದನ್ನು ಜಾಸ್ತಿ ಮಾಡುತ್ತೇವೆ, 12 ರಿಂದ 10 ಕ್ಕೆ ಕಡಿಮೆ ಮಾಡುತ್ತೇವೆ ಎಂದು ಹೇಳಿದ್ದಾರೆ. ನಿನ್ನೆ ಮೊನ್ನೆಯಿಂದ ಎಲ್ಲೆಲ್ಲಿ ಸೆಂಟ್ ವಾಸನೆ ಬಂದರೂ ಕೂಡ ಖರ್ಗೆಯವರೇ ಜ್ಞಾಪಕಕ್ಕೆ ಬರುತ್ತಾರೆ. ಬಡವರು ಸೆಂಟ್ ಉಪಯೋಗ ಮಾಡುವುದನ್ನು ಅವರು ಬಹಳ ಸ್ವಾರಸ್ಯಕರವಾಗಿ ಹೇಳಿದರು. 8 ರಿಂದ 10 ಅನ್ನು ಮಾಡಿರುವುದು 150 ವಸ್ತುಗಳ ಮೇಲೆ. ಅದೂ ಎಂತೆಂಥ ವಸ್ತುಗಳ ಮೇಲೆ ಎಂದರೆ ಗೋಧಿ ಹಿಟ್ಟಿನ ಮೇಲೆ, ರವೆ ಮೇಲೆ ನೀವು ಏನು ಜಾಸ್ತಿ ಮಾಡಿದ್ದೀರಲ್ಲಾ ಶೇಕಡ 2 ರಷ್ಟು ಅದು ನಿಮಗೆ ಒಳ್ಳೆಯದು ಮಾಡುತ್ತದೆಯೇ? ಯಾರು ಗೋಧಿ ಹಿಟ್ಟನ್ನು ಉಪಯೋಗ ಮಾಡುತ್ತಾರೆ? ನನಗೆ ಗೊತ್ತಿದ್ದ ಪ್ರಕಾರ ಹಿಂದೆ 1993 ರಲ್ಲಿ

ಶ್ರೀಮಾನ್ ವೀರಪ್ಪ ಮೊಯಿಲಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಇದೇ ರೀತಿ ಗೋಧಿ ಮೇಲೆ ರವೆ ಮೇಲೆ ಲೆವಿ ಜಾಸ್ತಿ ಮಾಡಿದಾಗ ತೆರಿಗೆ ಜಾಸ್ತಿ ಮಾಡಿದಾಗ ಜನತಾ ದಳದ ಧುರೀಣರು ಮುಂದೆ ನಿಂತು ಕೊಂಡು ಗೋಧಿ ಮೇಲೆ ಲೆವಿ ಹಾಕುವುದು ಬಹಳ ತಪ್ಪು, ಬಡವರ ಹೊಟ್ಟೆ ಮೇಲೆ ಹೊಡೆಯುತ್ತೀರಿ ಎಂದು ದೊಡ್ಡ ಗಲಾಟೆ ಮಾಡಿದಾಗ ಹಾಕಿದ್ದ ಲೆವಿಯನ್ನು ವಾಪಸ್ಸು ತೆಗೆದುಕೊಂಡರು. 1995 ರಲ್ಲಿ ಶ್ರೀ ಮಾನ್ ದೇವೇಗೌಡರು ಮುಖ್ಯ ಮಂತ್ರಿಗಳಾಗಿದ್ದಾಗ ಮತ್ತೆ ಜಾಸ್ತಿ ಮಾಡಿದಾಗ ಇಡೀ ಸಭೆಯ ಅಭಿಪ್ರಾಯ ತೆಗೆದುಕೊಂಡು ಹಾಕಿದ್ದ ಲೆವಿಯನ್ನು ವಾಪಸ್ಸು ತೆಗೆದುಕೊಂಡಿದ್ದರು. ಆದ್ದರಿಂದ ದಯವಿಟ್ಟು ಗೋಧಿ ಮೇಲೆ ಏನು ಕರ ಹಾಕುತ್ತಿದ್ದಿರಿ, ರವೆ ಮೇಲೆ ಏನು ಕರ ಹಾಕುತ್ತಿದ್ದಿರಿ ಇದರಿಂದಾಗಿ ಬ್ರೆಡ್ ಇರಬಹುದು. ಚಪಾತಿ ಇರಬಹುದು, ಬಿಸ್ಕತ್ ಇರಬಹುದು ಅದರ ಮೇಲೆ ಬೆಲೆ ಜಾಸ್ತಿ ಮಾಡಿ, ದಯವಿಟ್ಟು ಬಡವರ ಹೊಟ್ಟೆಯ ಮೇಲೆ ಹೊಡೆಯುವುದಕ್ಕೆ ಹೋಗಬೇಡಿ. ಅಂಥ ಕೆಟ್ಟ ಕೆಲಸ ನಿಮ್ಮಿಂದ ಆಗುವುದ ಬೇಡ. ದಯವಿಟ್ಟು ಅದನ್ನು ವಾಪಸ್ಸು ತೆಗೆದುಕೊಳ್ಳಿ. ಇಡೀ ದೇಶದಲ್ಲಿ ಎಲ್ಲಿಯೂ ಇಲ್ಲದ ರೀತಿಯಲ್ಲಿ ಗೋಧಿ ಮೇಲೆ, ರವೆ ಮೇಲೆ ತೆರಿಗೆ ಜಾಸ್ತಿ ಮಾಡುತ್ತಿದ್ದೀರಿ. ನೀವು ಯಾವುದರ ಮೇಲೆ ಜಾಸ್ತಿ ಮಾಡಿದ್ದೀರಿ ಅಂದರೆ, ಅಲ್ಯೂಮಿನಿಯಂ ತುಂಡು, ಹಿತ್ತಾಳೆ ಪಾತ್ರೆ, ಬೆಣ್ಣೆ- ತುಪ್ಪ, ಬಿಸ್ಕತ್ತುಗಳು, ಅಲ್ಲದೆ ಆಗಾಗ ನೀವು ಬಡವರ ಬಗ್ಗೆ ಕಣ್ಣೀರು ಸುರಿಸುವುದಕ್ಕೆ ಏನು ಉಪಯೋಗ ಮಾಡುತ್ತೀರಿ ಗ್ಲಿಸರಿನ್ ಅದರ ಮೇಲೆ ಕೂಡ ಜಾಸ್ತಿ ಮಾಡಿದ್ದೀರಿ. ಇಂಕುಗಳು, ಸೀಮೆಸುಣ್ಣ ಇವುಗಳ ಮೇಲೆ ಜಾಸ್ತಿ ಮಾಡುವುದು, ನೀವು ಕಡಿಮೆ ಮಾಡುವುದು ಯಾವುದರ ಮೇಲೆ ಅಂದರೆ ಏರೋಪ್ಲೈನ್, ಜಟ್‌ಪ್ಲೈನ್ ಮತ್ತು ಅದರ ಬಿಡಿ ಭಾಗಗಳು, ಚೈನಾವೇರ್, ಪ್ಲೇಯಿಂಗ್ ಕಾರ್ಡ್ಸ್. ಪ್ಲೇಯಿಂಗ್ ಕಾರ್ಡ್‌ಗಳ ಮೇಲೆ ಶೇಕಡ 2 ರಷ್ಟು ತೆರಿಗೆ ಇಳಿಸಿ ಯಾರಿಗೆ ನೀವು ಸಹಾಯ ಮಾಡುವುದಕ್ಕೆ ಹೊರಟಿದ್ದೀರಿ? ರಾತ್ರಿ ಇಡೀ ಇಸ್ಪೀಟ್ ಆಡುವವರಿಗೆ ಕಡಿಮೆ ಮಾಡುತ್ತೀರಾ? ಯಾರಿಗೋಸ್ಕರ ಶೇಕಡ 2 ರಷ್ಟು ತೆರಿಗೆಯನ್ನು ಕಡಿಮೆ ಮಾಡಿದ್ದೀರಿ? ಜೊತೆಗೆ ಆಲ್ಕೋಹಾಲ್, ಶ್ಯಾಂಪು ವಸ್ತುಗಳ ಮೇಲೆ ಕಡಿಮೆ ಮಾಡಿ ಗೋಧಿ ಮೇಲೆ, ಅಲ್ಯೂಮಿನಿಯಂ ಮೇಲೆ, ಹಿತ್ತಾಳೆ ಮೇಲೆ ಜಾಸ್ತಿ ಮಾಡುತ್ತಿದ್ದೀರಿ. ಇದನ್ನು ಯಾರಾದರೂ ಸರಳೀಕರಣ ಎಂದು ಕರೆಯುತ್ತಾರೆಯೆ? ದಯವಿಟ್ಟು ನೀವು ಉತ್ತರಿಸುವಾಗ ಇದನ್ನು ಸರಿ ಮಾಡಿ. ನೀವು ಒಂದು ಕೆಲಸ ಮಾಡಿ. 8- 10 ಪರ್ಸೆಂಟ್ ಜಾಸ್ತಿ ಮಾಡುವುದು, 12 ರಿಂದ 10 ಪರ್ಸೆಂಟ್‌ಗೆ ಇಳಿಸುವುದು ಇದೆಲ್ಲಾ ಮಾಡುವುದಕ್ಕಿಂತ ಎಲ್ಲವನ್ನು ಶೇಕಡ 8 ಕ್ಕೆ ತನ್ನಿ; 10 ಬೇಡ, 12 ಬೇಡ. ಆಗ ಬಹಳ ಅನುಕೂಲವಾಗುತ್ತದೆ. ಆಗ ಬಡವರು ಉಳಿದುಕೊಳ್ಳುತ್ತಾರೆ. ಆಮೇಲೆ ಈ ರೀತಿ ಅಂಕಿಅಂಶಗಳ ಗೋಜಲಾಟ ಇರುವುದಿಲ್ಲ. ನಿಮಗು ಕೂಡ ಚುನಾವಣೆ, ಚುನಾವಣೆಯ ನಂತರ ಫಲಿತಾಂಶ, ಇದರಿಂದಾಗಿ ಈ ಕಡೆ ಅಷ್ಟು ಗಮನ ಕೊಡುವುದಕ್ಕೆ ಆಗಿಲ್ಲ. ತಮ್ಮ ಅಧಿಕಾರಿಗಳು ಏನೋ ತಂದು ಇಟ್ಟರು, ಆಯವ್ಯಯ ಮಂಡಿಸಬೇಕು 18 ನೇ ತಾರೀಖು ಎಂದು ಮಾಡಿಬಿಟ್ಟಿದ್ದೀರಿ. ಈಗ ನಿಮಗೆ ಒಂದು ವಾರ ಸಮಯ ಇದೆ.

(ಛೇರ್ಮನ್ (ಶ್ರೀ ಶರಣಪ್ಪ) ನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈಗಲಾದರೂ ಒಂದು ವಾರ ಸಮಯವಿದೆ. ತಾವು ಉತ್ತರ ಕೊಡುವಾಗ ದಯವಿಟ್ಟು ಈ ಅಂಕಿ-ಅಂಶಗಳನ್ನು ನೋಡಿ. ಯಾರು ಯಾರು ಅದರ ಬಗ್ಗೆ ಟೀಕೆ ಮಾಡಿದ್ದಾರೆ, ಕಳಕಳಿ ತೋರಿಸಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು, ಈ ರಾಜ್ಯದ ಬಡವರಿಗೆ, ಗ್ರಾಮೀಣ ಪ್ರದೇಶದವರಿಗೆ ಸ್ವಲ್ಪವಾದರು ಶ್ರೀ ಸಿದ್ದರಾಮಯ್ಯನವರ ಕಾಲದಲ್ಲಿ ಅನ್ಯಾಯವಾಗಲಿಲ್ಲ, ಒಳ್ಳೆಯದಾಯಿತೆಂಬ ಹೆಸರು ಬರಲೆಂಬ ದೃಷ್ಟಿಯಿಂದಲಾದರೂ ನೀವು ಕ್ರಮ ತೆಗೆದುಕೊಳ್ಳಿ. ಅವರು ಭಾಷಣ ಮಾಡುವಾಗ ಬಹಳ ದೊಡ್ಡದಾಗಿ

8ನೇ ಪ್ಯಾರದಲ್ಲಿ, ರಾಷ್ಟ್ರದ ಸ್ವಾತಂತ್ರ್ಯದ ಚಿನ್ನದ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಿದೆ ಎಂದು ಹೇಳಿದರು. ಇದು ಒಳ್ಳೆಯ ಅಂಶ. ಇವತ್ತು ನಾವು ಇಂಥ ಒಂದು ಸಂಕ್ರಮಣ ಕಾಲದಲ್ಲಿದ್ದೇವೆ. ನಾನು ತಮ್ಮ ಮೂಲಕ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ, ಏನೆಂದರೆ, ಸುಮಾರು ಒಂದೂವರೆ ತಿಂಗಳ ಹಿಂದೆ ಬೆಂಗಳೂರಿನಲ್ಲಿ ನಾನೊಂದು ಕಾರ್ಯಕ್ರಮದಲ್ಲಿ ಭಾಗಿಯಾಗಿದೆ. ಆ ಕಾರ್ಯಕ್ರಮದಲ್ಲಿ ಇತ್ತೀಚೆಗೆ ಭಾರತ ರತ್ನ ಪಡೆದ ನಮ್ಮ ದೇಶದ ಹೆಮ್ಮೆಯ ಆಸ್ತಿ, ಖ್ಯಾತ ವಿಜ್ಞಾನಿ, ಅತ್ಯಂತ ಬಡತನದಿಂದ ಬೆಳೆದು ಇವತ್ತು ರಕ್ಷಣಾ ಇಲಾಖೆಗೆ ಸಲಹೆಗಾರರಾಗಿರುವ ಡಾ: ಅಬ್ದುಲ್ ಕಲಾಂರವರು ಭಾಷಣ ಮಾಡಿದಾಗ, ಒಂದು ಅಂಶವನ್ನು ಹೇಳಿದರು, ಏನೆಂದರೆ, ಅವರು ಹೈದರಾಬಾದಿನ ಇದೇ ರೀತಿಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಾಗ 12- 13 ವರ್ಷದ ಒಬ್ಬ ಬಾಲಕಿಯನ್ನು ಇವರು, ನಿನ್ನ ಜೀವನದ ಆಕಾಂಕ್ಷೆ ಏನು ಎಂದು ಪ್ರಶ್ನಿಸಿದರು. ನಂತರ ಆ ಪ್ರಶ್ನೆಯನ್ನು ಅವರು, modified his question. "I am asking about your ambition in your life and not your parents' ambion in your life" ಎಂದು ಕೇಳಿದರು. ಬಹಳ ಸಲ ತಂದೆ-ತಾಯಿ ಆಂಬಿಷನ್‌ನ್ನು ಮಕ್ಕಳ ಮೇಲೆ ಹೇರುತ್ತಾರೆ. ಆದಕ್ಕೆ ಆ ಮಗು ಹೇಳಿದ ಉತ್ತರ ನಮಗೂ ಸಹ ಹೇಳಿದ ಉತ್ತರವೆಂದು ಭಾವಿಸಬಹುದು. ಆ ಮಗು " My ambition in my life is to live in a developed India and not a developing India" ಎಂದು ಹೇಳಿತು. ಅದನ್ನು ಮುಂದುವರಿಸುತ್ತಾ ಅವರು, ''50 ವರ್ಷಗಳ ಹಿಂದೆ ನಾವೊಂದು ಮೈಲಿಗಲ್ಲನ್ನು ಧಾಟಿದೆವು. ಈ ದೇಶಕ್ಕೆ ಸ್ವಾತಂತ್ರ್ಯ ಬೇಕೆಂದು ಶ್ರಮಿಸಿದೆವು, ಸ್ವಾತಂತ್ರ್ಯ ಸಿಕ್ಕಿತು. ಇದಾದನಂತರ, still we ae a developing country, we have not become a developed country". ಎಂದು ಹೇಳಿದರು. ಇದನ್ನು ಹೋಗಲಾಡಿಸುವುದಕ್ಕೆ ನಾವು, ನಮ್ಮ ರಾಜ್ಯದ ಅರ್ಥ ಸಚಿವರು, ಕೃಷಿ ಸಚಿವರು ಇರಬಹುದು, ಇನ್ನು 3 ವರ್ಷಗಳಲ್ಲಿ ರಾಜ್ಯ ಕೇರಳವನ್ನು ಮೀರಿಸುವಂತಹ ಒಂದು ಡೆವಲಪ್ಡ್ ಸ್ಟೇಟ್ ಎಂದು ಆಗುತ್ತದೆಂಬು ನಾವೊಂದು ತೀರ್ಮಾನವನ್ನು ತೆಗೆದುಕೊಳ್ಳಬಹುದಾ? ಮೀರಿಸುತ್ತೇವೆಂದು ಚಾಲೆಂಜ ತೆಗೆದುಕೊಳ್ಳಬಹುದಾ? ನಾವು ಹೇಗೆ ವೈಯಕ್ತಿಕ ಜೀವನದಲ್ಲಿ ಟಾರ್ಗೆಟ್ ಇಟ್ಟುಕೊಳ್ಳುತ್ತೇವೆಯೋಣ, ಹಾಗೆಯೇ ಸಮಾಜದ ದೃಷ್ಟಿಯಿಂದ ಟಾರ್ಗೆಟ್ ಇಟ್ಟುಕೊಳ್ಳಬೇಕು. ನನ್ನ ಅಧಿಕಾರಾವಧಿಯಲ್ಲಿ, "I will achieve this target, I will cross this milestone" ಎಂದು ಕೊಳ್ಳಬೇಕು. ಇವತ್ತು ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿರುವಾಗ, ನನಗೆ ಸಂಕಟ, ದು:ಖವಾಗುತ್ತದೆ. ಸುಮಾರು ಒಂದು ವರ್ಷದಿಂದ ನಾವು ಈ ಸದನದಲ್ಲಿ ಮಾತನಾಡುತ್ತಿದ್ದೇವೆ. ಬಡ್ಜೆಟ್ ಬಗ್ಗೆ ಬೇರೆ ಬೇರೆ ಇಲಾಖೆಗಳ ಬಗ್ಗೆ ಚರ್ಚೆಯಾಯಿತು. ವಿಶೇಷವಾಗಿ ನಗರಾಭಿವೃದ್ಧಿ ಬಗ್ಗೆ ಚರ್ಚೆಯಾಯಿತು. ಚರ್ಚೆಯ ನಂತರ, ಮಾನ್ಯ ಶ್ರೀ ಬಚ್ಚೇಗೌಡರು ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಟ್ಟರು. ಆದರೂ ಕೂಡ, ಸುಮಾರು 20-22 ಜನ ನಮ್ಮ ಸಹ ಸದಸ್ಯರಿಗೆ ಸಮಾಧಾನವಾಗಲಿಲ್ಲ. ನಮಗೆ ಮತ್ತಷ್ಟು ಕ್ಲಾರಿಫಿಕೇಷನ್ ಬೇಕೆಂದು ಕೈ ಎತ್ತಿದರು. ಆ ದಿನ ಸಭಾಧ್ಯಕ್ಷರು ಎಲ್ಲರಿಗೂ ಒಂದೊಂದು- ಎರಡು ನಿಮಿಷ ಅವಕಾಶ ಕೊಟ್ಟರು. ನನಗೆ ಬೇಜಾರಾಯಿತು. ನಾವು ಸ್ವಾತಂತ್ರ್ಯದ 50ನೇ ವರ್ಷದಲ್ಲಿದ್ದೇವೆ. ಅದು ಹೈದರಾಬಾದ್-ಕರ್ನಾಟಕ, ಮುಂಬೈ-ಕರ್ನಾಟಕ, ಬಯಲು ಸೀಮೆ, ಹಳೇ ಮೈಸೂರು, ಮಲೆನಾಡ ಪ್ರದೇಶಗಳ ಶಾಸಕರು ಇರಬಹುದು, ಅವರೆಲ್ಲಾ, ನಮಗೆಲ್ಲಾ ಕುಡಿಯುವ ನೀರಿಲ್ಲವೆಂದೂ, ನಮ್ಮ ಊರಿನಲ್ಲಿ ವಾರಕ್ಕೊಂದೇ ದಿನ ನೀರು ಸಿಗುತ್ತದೆ, ನಮ್ಮ ಊರಿನಲ್ಲಿ ಒಂದು ಕೊಡ ನೀರು ತರಲು 5 ಕಿ.ಮೀ. ಹೋಗಬೇಕೆಂದರು. ನಮ್ಮ 50 ವರ್ಷಗಳ

ಸಾಧನೆ ಇದೆಯೇ? ಇದನ್ನು ನಾನು ಆಡಳಿತ ಪಕ್ಷ ಹೆಸರು ಹೇಳಲು ಹೇಳುತ್ತಿಲ್ಲ. We are all responsible 50 ವರ್ಷಗಳಾದ ಮೇಲೆ, ಶಾಸನ ಸಭೆಯಲಿ ನಿಂತು ಕುಡಿಯುವ ನೀರಿನ ಬಗ್ಗೆ ಇಂದು ಮಾತನಾಡಿದರೆ, ನಾವು ಎಲ್ಲಿಯವರೆಗೆ ಪ್ರಗತಿ ಸಾಧಿಸಿದ್ದೇವೆನ್ನುವ ಪ್ರಶ್ನೆ ಎದುರಾಗುತ್ತದೆ ನಮ್ಮ ಕರ್ನಾಟಕ ಇಸ್ರೇಲ್ ದೇಶ ಅಲ್ಲ. ನೀರೇ ಇಲ್ಲದ ದೇಶವಲ್ಲ. ಎಲ್ಲಾದರೂ ಒಂದು ಕೆರೆ, ನದಿ, ಅಂತರ್ಜಲ ಇದ್ದೇ ಇದೆ. ನಾವೇನು ಮಾಡಿದ್ದೇವೆಂದರೆ, ಕೆರೆಗಳನ್ನೆಲ್ಲಾ ಬತ್ತಿಸಿ, ನದಿ ನೀರನ್ನೆಲ್ಲಾ ಹರಿಹರದ ಪಾಲಿ ಫೈಬರ್ ಅಂತಹವರಿಗೆ ಒತ್ತೆಯಿಟ್ಟು, ಇಡೀ ನದಿಯನ್ನು ಕಲುಷಿತಗೊಳಿಸಿ, ಅಂತರಜಲವನ್ನು ಹಾಳು ಮಾಡಿ, ಕುಡಿಯುವ ನೀರಿಲ್ಲದ ಪರಿಸ್ಥಿತಿಗೆ ತಂದಿದ್ದೇವೆ. ನನಗೆ ಅರ್ಥವಾಗದಿರುವುದೆಂದರೆ, 49 ವರ್ಷಗಳ ನಮ್ಮ ದುಡ್ಡು ಎಲ್ಲಿ ಹೋಯಿತು? ಶ್ರಮ ಎಲ್ಲಿ ಹೋಯಿತು? ನಮ್ಮ ಚಿಂತನೆ ಎಲ್ಲಿ ಹೋಯಿತು? ಒಂದಂತೂ ನಿಜ. 49 ವರ್ಷಗಳವರೆಗೆ ನೀರು ಕೊಡದಿದ್ದರೆ, ಈಗ ಕೊಡುವುದೂ ಕಷ್ಟ ಯಾರೋ ಒಬ್ಬರು ಹೇಳಿದ ಹಾಗೆ, ಮುಂದಿನ 3ನೇ ವಿಶ್ವಯುದ್ಧವೇನಾದರೂ ನಡೆದರೆ, ಅದು ಕುಡಿಯುವ ನೀರಿಗೋಸ್ಕರ ನಡೆಯುತ್ತದೆನ್ನುವುದು ಜನಜನಿತವಾಗಿದೆ. ಅಷ್ಟೊಂದು ಕೊರತೆ ಇದೆ. ನಾವು ಕುಡಿಯುವ ನೀರನ್ನು ಉಳಿಸಿಕೊಳ್ಳುತ್ತಿಲ್ಲ. ಈ ಕಡೆ ಯೋಜನೆ ಕೂಡ ಕಾರ್ಯಗತವಾಗುತ್ತಿಲ್ಲ. ಇವತ್ತು ನಮ್ಮ ಆದ್ಯತೆ ಕೂಡ ಬದಲಾಗುತ್ತಿದೆ. ಇವತ್ತು, ಇಂಟರ್ ನ್ಯಾಷನಲ್ ಏರ್ ಪೋರ್ಟ್, ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ, ಸರ್ಕುಲರ್ ರೈಲ್ವೆ ಫೈ-ಓವರ್ ನಮಗೆ ಬೇಕಾಗಿರುವುದು. ಹೀಗಿರುವಾಗ, ಕುಡಿಯುವ ನೀರಿನ ಬಗ್ಗೆ ಯೋಚಿಸಲು ನಮಗೆ, ನಿಮಗೆ ಸಮಯವಾದರೂ ಎಲ್ಲಿದೆ? ತುಂಬಾ ಹೇಳಿದರೆ, ಮುಖ್ಯಮಂತ್ರಿಗಳು, ಬಿಸ್ಲೇರಿ ಸಿಗುತ್ತದೆ, ಇನ್ಯಾಕೆ ನೀರು, ಅದನ್ನು ಪ್ರೈವೇಟ್‌ನವರು ಮಾಡಿಕೊಳ್ಳುತ್ತಾರೆಂದು ಹೇಳಬಹುದು. 50 ವರ್ಷಗಳಾದರೂ ಕುಡಿಯುವ ನೀರನ್ನು ಕೊಡದಿರುವ ಪರಿಸ್ಥಿತಿ ಬಂದಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಹೊಸದಾಗಿ ನಾಗರಿಕ, ವಿಮಾನಯಾನ ಸಚಿವರಾದ ಅಧಿಕಾರ ವಹಿಸಿಕೊಂಡವರೂ ಸಹ ಪ್ರಥಮ ಆದ್ಯತೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಎಂದು ಹೇಳಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ :- ಈ ಸಂದರ್ಭದಲ್ಲಿ ಶ್ರೀ ರೆಡ್ಡಿಯವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ, ಏನೆಂದರೆ, ಅವರ ಇಲಾಖೆಯವರು ವಿಮಾನ ಬಿಡುವವರು ನೀರು ಬಿಡುವುದಿಲ್ಲ, ನೀರು ಬಿಡುವವರು ವಿಮಾನ ಬಿಡುವುದಕ್ಕೆ ಹೋಗುತ್ತಾರೆ, ಅದೇ ನಮ್ಮ ಸಮಸ್ಯೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಇಲ್ಲಿ ಆದ್ಯತೆಯ ಪ್ರಶ್ನೆ ಬರುತ್ತದೆ. ರಾಷ್ಟ್ರದ ಆದ್ಯತೆ ಕೂಡ ಇವತ್ತು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವೆಂದಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್ :- ಆಡಳಿತ ನಡೆಸುತ್ತಿರುವವರು, ನಾವೆಲ್ಲರೂ ಚಿಂತನೆ ನಡೆಸಬೇಕಾದ ವಿಚಾರವಿದು. 50 ನೇ ವರ್ಷದಲ್ಲಿ ನಾವೇನೋ ಒಂದಷ್ಟು ಕಾರ್ಯಕ್ರಮ ಮಾಡುವುದಲ್ಲ. 50ನೇ ವರ್ಷದಲ್ಲಿ ನಾವೆಲ್ಲಿಗೆ ಬಂದಿದ್ದೇವೆಂಬ ಅವಲೋಕನ ಮಾಡಬೇಕು. ನಾವು ಮುಂದೆ ಎಲ್ಲಿಗೆ ಹೋಗಬೇಕೆಂದು ನಾವಿವತ್ತು ಯೋಚಿಸಬೇಕು. ಈಗ ಯೋಚಿಸದಿದ್ದರೆ ಯಾವಾಗ ಯೋಚಿಸುತ್ತೀರಿ? ಈ ಸಂದರ್ಭದಲ್ಲಿ 50ನೇ ವರ್ಷದಲ್ಲಿ ಭಾರೀ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎಂದು ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದರು. 50ನೇ ವರ್ಷದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವಕ್ಕೋಸ್ಕರ ಆಶ್ರಯ ಯೋಜನೆಯ ನಿವೇಶನ ಹಕ್ಕುಪತ್ರಕ್ಕೆ ಯಾರ್ಯಾರು ಸಹಿ ಮಾಡಿದ್ದಾರೆಂದರೆ, ಕೋಲಾರ ನಗರಸಭೆಯ ಪೌರಾಯುಕ್ತರು, ಅಧ್ಯಕ್ಷರು, ಉಪಾಧ್ಯಕ್ಷರು. ಸಹಿ

ಆಗಿರುವುದು ದಿ: 14-8-97 ರಂದು ಅಂದರೆ ಒಂದು ದಿವಸ ಮುಂಚೆ ಆಗಿದೆ. ಇದು ಸ್ವಾತಂತ್ರ್ಯೋತ್ಸವದ ಎಂಥ ಅಣಕವಾಗುತ್ತದೆ. How it will become farce ಅನ್ನುವುದಕ್ಕೋಸ್ಕರ ನಾನು ಯೋಚಿಸುತ್ತಿರುವುದು. ಆಶ್ರಯ ಯೋಜನೆಯ ನಿವೇಶನ ಹಕ್ಕುಪತ್ರ-ಕರ್ನಾಟಕ ಸರ್ಕಾರವು ಆಶ್ರಯ ಯೋಜನೆಯಡಿಯಲ್ಲಿ ಸರ್ಕಾರಿ ಆದೇಶ ಸಂ: ಎಚ್ ಯುಡಿ.... ಕೋಲಾರ ಜಿಲ್ಲೆಯಲ್ಲಿ, ಕೋಲಾರ ತಾಲ್ಲೂಕಿನ ಮುಂದೆ ಗ್ರಾಮದ ಹೆಸರು ಖಾಲಿ ಬಿಟ್ಟರು, ಇಂಥ ಗ್ರಾಮದ ವಾಸಿ ಶ್ರೀ ವೆಂಕಟಪ್ಪ, ಅವರ ಹೆಂಡತಿ ತಿಮ್ಮಕ್ಕನವರಿಗೆ ಉಚಿತವಾಗಿ ಹಿಂಬದಿಯಲ್ಲಿ ನಮೂದಿಸಿರುವ ಶುಲ್ಕಗಳನ್ವಯ ನಿವೇಶನ ನೀಡಲಾಗಿದೆ. ಆದರೆ, ಮುಂದಿನ ಪ್ರಶ್ನೆ, ನಿವೇಶನದ ವಿವರ ಕುರಿತದ್ದು. ಕೋಲಾರ ಜಿಲ್ಲೆ, ಕೋಲಾರ ತಾಲೂಕಿನ ಕಸಬಾ ಹೋಬಳಿಯ ಎನ್ನುವುದರ ಮುಂದೆ (ಖಾಲಿ ಜಾಗ), ಅಲ್ಲಿ ರಚಿಸಿರುವ (ಖಾಲಿ ಜಾಗ), ವಿಸ್ತೀರ್ಣವುಳ್ಳ, ಉತ್ತರ-ದಕ್ಷಿಣ (ಖಾಲಿ ಜಾಗ) ಅಡಿ, ಪೂರ್ವ-ಪಶ್ಚಿಮ (ಖಾಲಿ ಜಾಗ) ಅಡಿ, ಚಕ್ಕುಬಂದಿ ಪೂರ್ವಕ್ಕೆ (ಖಾಲಿ ಜಾಗ), ಪಶ್ಚಿಮಕ್ಕೆ (ಖಾಲಿ ಜಾಗ), ಉತ್ತರಕ್ಕೆ (ಖಾಲಿ ಜಾಗ), ದಕ್ಷಿಣಕ್ಕೆ (ಖಾಲಿ ಜಾಗ). ಈ ರೀತಿ ಇದೆ. ನನ್ನ ಹತ್ತಿರ ಒಂದಲ್ಲ ಇರುವುದು. ಸುಮಾರು ಆ ಕೋಲಾರ ನಗರಸಭೆಯವರು ಹಂಚಿರುವುದನ್ನೆಲ್ಲಾ ನಾನು ಕೊಡುತ್ತಿದ್ದೇನೆ. ಇವೆಲ್ಲಾ ಒರಿಜಿನಲ್. ಅವರ ಹತ್ತಿರ ಕಲೆಕ್ಟ ಮಾಡಿಕೊಂಡು ಬಂದೆವು. ನೀವು ಸೈಟ್ ಅಂತೂ ಕೊಟ್ಟಿಲ್ಲ ಉಪ್ಪುಕಾರ ಹಾಕಿಕೊಂಡು ನೆಕ್ಕಿ ಎಂದರಲ್ಲಾ ಅದಕ್ಕೋಸ್ಕರ. ಇದು ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ನಮ್ಮ ರಾಜ್ಯಕ್ಕೆ ಬಗೆದಿರುವ ದ್ರೋಹವಾಗಿದೆ. ನಾನು ಯಾವ ಸ್ಕೂಲಿನಲ್ಲಿ ಓದಿದೆನೋ, ಆ ಸ್ಕೂಲಿನಲ್ಲಿ ಬೈರೇಗೌಡರು ಎಚ್ ಎಂ ಆಗಿದ್ದಾರು. ಎಲ್ಲೋ ಹೊಡೆದುಕೊಂಡು ಬಂದಿರಿ ಅಂದರು. ನಾನು ಬೈರೇಗೌಡರನ್ನು 15-20 ವರ್ಷಗಳಿಂದ ಆದರ್ಶ ನಾಯಕರೆಂದು ತಿಳಿದು ಅವರ ಹೆಜ್ಜೆಯಲ್ಲೇ ಬರುತ್ತಿದ್ದೇನೆ. ಅವರು ಹಿಂದೆ ಏನು ಮಾಡಿದರೋ, ಅದನ್ನೇ ನಾನು ಇಂದು ಮಾಡುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಎಲ್ಲೋ ಹೊಡೆದುಕೊಂಡು ಬಂದರು ಎಂದರು. ನಿಮ್ಮ ಎಚ್.ಎಂ. ಹೀಗಿರಬೇಕಾದರೆ, ಇನ್ನು ಶಿಷ್ಯ ಹೇಗಿರಬೇಕು?

ಶ್ರೀ ಎಸ್. ಸುರೇಶ್‌ಕುಮಾರ್ :- ನೀವು ಪ್ಯಾರಾ 13 ರಲ್ಲಿ, ವೆಚ್ಚದ ನಿಯಂತ್ರಣ ಎಂದು ಹೇಳಿದಿರಿ. ಇದೊಂದು ರೀತಿಯ ರಿಚ್ಯುವಲಿಸ್ಟಿಕ್ ಹೇಳಿಕೆ. ತಾವು ಹೋದ ಸಾರಿ ಭಾಷಣ ಮಾಡುತ್ತಾ ಹೇಳಿದ್ದಿರಿ....

ಶ್ರೀ ಸಿ. ಬೈರೇಗೌಡ :- ಇಂಥದ್ದು ಎಷ್ಟಿವೆ ಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ :- ಎಲ್ಲಾ ಕೊಟ್ಟಿದ್ದೇನೆ. ಒಂದು ಕೆಲಸ ಮಾಡುತ್ತೇನೆ. ಎಲ್ಲಾ ಜೆರಾಕ್ಸ್ ಮಾಡಿಸಿಕೊಡುತ್ತೇನೆ. ಹೋದಸಾರಿ ಸನ್ಮಾನ್ಯ ಅರ್ಥಮಂತ್ರಿಗಳು ಭಾಷಣ ಮಾಡುತ್ತಾ ಹೇಳಿದರು. "As a first step therefore, it has been decided to reduce the number of Government posts by 5%. A Cabinet Sub-Committee is already engaged in this exercise and we hope to give effect to this reduction in the near future."

ಅಂದರೆ ಅರ್ಥ ಏನು? ಅಂದರೆ 15 ದಿವಸ, 1 ತಿಂಗಳು, 2 ತಿಂಗಳು ಇರಬಹುದು. ಅದು ಬಿಟ್ಟು ಈ ಬಾರಿ ಭಾಷಣದಲ್ಲಿ ಏನು ಹೇಳಿದ್ದೀರಿ? ಈ ಬಾರಿಯ ಭಾಷಣದಲ್ಲಿ ಹೇಳಿದ್ದೀರಿ '' ಈ ಸಂಬಂಧ

ಸಚಿವರ ಸಂಪುಟ ಉಪಸಮಿತಿಯು ಸುದೀರ್ಘ ಚರ್ಚೆ ನಡೆಸುತ್ತಿದ್ದು... ಒಂದು ವರ್ಷ ಆಯಿತು. ಗಜಗರ್ಭ ....'' ಸುಧೀರ್ಘ ಚರ್ಚೆ ನಡೆಸುತ್ತಿದ್ದು ಶೀಘ್ರದಲ್ಲೇ ವರದಿಯನ್ನು ಸಲ್ಲಿಸಲಿದೆ. ತಾವು ಸಚಿವ ಸಂಪುಟ ಉಪಸಮಿತಿಯನ್ನು ಏತಕ್ಕೆ ಮಾಡಿದ್ದು? ಹೇಗೆ 5 ಪರ್ಸೆಂಟ್ ಕಟ್ ಮಾಡುವುದೆ ಎಂದು ಗೈಡ್‌ಲೈನ್ ಕೊಡುವುದಕ್ಕೋಸ್ಕರ. You are contradicting yourself. ಮುಂದೆ ಹೇಳುತ್ತೀರಿ ನೀವು. 'ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಇಲಾಖೆಗಳಲ್ಲಿ ದಿನಾಂಕ 1-4-98 ರಿಂದ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೆ ಸ್ಥಗಿತಗೊಳಿಸಲು ಉದ್ದೇಶಿಸಲಾಗಿದೆ. ಹಾಗಾದರೆ ನೀವು ಕ್ಯಾಬಿನೆಟ್ ಉಪಸಮಿತಿ ಏತಕ್ಕೆ ಮಾಡಿದ್ದೀರಿ, if you can take decision without the Committee submitting a report? ಅದಕ್ಕೋಸ್ಕರ ಕ್ಯಾಬಿನೇಟ್ ಉಪಸಮಿತಿ ವರದಿಯಾದರೂ ಮುಂಚೆ ತರಿಸಬೇಕಾಗಿತ್ತು.

ಶ್ರೀ ಸಿದ್ದರಾಮಯ್ಯ :- ಸಬ್-ಕಮಿಟಿ ರಿಪೋರ್ಟ್ ರೆಡಿ ಇದೆ. ಈ ವರದಿ ಕ್ಯಾಬಿನೆಟ್ ಮುಂದೆ ಹೋಗಬೇಕು. In the mean while, one of the major recommendations of the Sub Committee is to freeze all the posts which are vacant.

ಶ್ರೀ ಎಸ್. ಸುರೇಶ್ ಕುಮಾರ್ :- ಅಧ್ಯಕ್ಷರೇ, unless it is approved....

ಶ್ರೀ ಸಿದ್ದರಾಮಯ್ಯ :- ರೆಡಿ ಇದೆ ಎಂದು ಹೇಳಿದ್ದು, ಇನ್ನೂ ಕೊಟ್ಟಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :-ಇಲ್ಲಿ ಪ್ರಶ್ನೆ ಇರುವುದು ಆ ರಿಪೋರ್ಟಾದರೂ ಮೊದಲು ಕೊಡಬೇಕು ಅಥವಾ ತೀರ್ಮಾನ ತೆಗೆದುಕೊಂಡಿಲ್ಲ ಎಂದಾದರೂ ಹೇಳಬೇಕಾಗಿತ್ತು.

ಶ್ರೀ ಎಸ್. ಸುರೇಶ್ ಕುಮಾರ್ :- 18 ನೇ ತಾರೀಖಾದ ಮೇಲಾದರೂ ಸಲ್ಲಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. 17 ನೆ ತಾರೀಖು ತಾವು ಹೇಳಿರುವುದು ಏನು? ಈ ಸಂಬಂಧ ಸಚಿವಸಂಪುಟದ ಉಪಸಮಿತಿ ಸುದೀರ್ಘ ಚರ್ಚೆ ನಡೆಸುತ್ತಿದ್ದು ಶೀಘ್ರದಲ್ಲೇ ವರದಿಯನ್ನು ಸಲ್ಲಿಸಲಿದೆ. ಇದು ಬಿಡಿ.

ಸರಿಯಾದ ಸಮಯಕ್ಕೆ ಶ್ರೀ ಅನಂತನಾಗ್ ಅವರು ಬಂದಿದ್ದಾರೆ. ಪ್ಯಾರಾ 17ರಲ್ಲಿ ಏನು ಹೇಳಿದೆ ಇಲ್ಲಿ? ಒಂದು ತರಹ ವ್ಯಾಮೋಹ. ವಿದೇಶದ ಬಗ್ಗೆ, ವಿದೇಶ ಹಣದ ಬಗ್ಗೆ, ವಿದೇಶದ ವಿನಿಯೋಗದ ಬಗ್ಗೆ ವ್ಯಾಮೋಹ. ಆದರೆ ಅದರೊಳಗೆ ಇರುವ ಅಪಾಯದ ಬಗ್ಗೆ ನಾವು ಯಾರೂ ಕೂಡ ಗಮನ ಕೊಡುತ್ತಿಲ್ಲ. ತಾವು ಹೇಳಿದ್ದೀರಿ '' ವಿದೇಶಿ ನೆರವಿನ ಯೋಜನೆಗಳು ನಮ್ಮ ಆದ್ಯತಾ ವಲಯದ ಕಾರ್ಯಕ್ರಮಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸುತ್ತವೆ''. ಬೆಂಗಳೂರು ಜಲಮಂಡಳಿ ಇದೆ. ಬೆಂಗಳೂರು ಜಲಮಂಡಳಿಗೆ ಒ.ಎ. ಸಿ. ಎಫ್. ಲೋನ್ ತೆಗೆದುಕೊಳ್ಳುತ್ತಿದ್ದಿರಿ ನಾಲ್ಕನೇ ಹಂತಕ್ಕೆ. ಇದುವರೆಗೆ ಮೂರು ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಬಿಟ್ಟಿದೆ. ಮೊದಲನೇ ಯೋ 30 ಕೋಟಿ ರೂಪಾಯಿ ಖರ್ಚು ಮಾಡಿ ಕಾವೇರಿ ಫಸ್ಟ್ ಸ್ಟೇಜ್ ತಂದೆವು. ನೀರು ಸಾಲಲಿಲ್ಲ ಬಾಯಾರಿಕೆ ಇಂಗಲಿಲ್ಲ. ಸೆಕೆಂಡ್ ಸ್ಟೇಜ್ ತಂದೆವು. ಇದಕ್ಕೆ 60 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಇದೂ ಸಾಲಲಿಲ್ಲ. ಬೆಂಗಳೂರು ನಿಯಂತ್ರಣ ಮಾಡಲಿಕ್ಕೆ ಆಗಲಿಲ್ಲ. ಥರ್ಡ್ ಸ್ಟೇಜ್‌ಗೆ ಹೋದೆವು. 270 ಕೋಟಿ ಇದಕ್ಕೆ ಖರ್ಚು ಮಾಡಿದ್ದು. ಇದು ಸಾಲಲಿಲ್ಲ. ನಾಲ್ಕನೇ ಸ್ಟೇಜ್‌ಗೆ ಹೋಗಬೇಕೆಂದು ಜಲಮಂಡಳಿಯವರು ಒಂದು ಎಸ್ಟಿಮೇಟ್ ಮಾಡಿದರು. ಜಲಮಂಡಳಿ ಎಸ್ಟಿಮೇಟ್ ಪ್ರಕಾರ ನಾಲ್ಕನೇ ಸ್ಟೇಜಿಗೆ 500 ಕೋಟಿ ರೂಪಾಯಿ ಖರ್ಚಾಗಬೇಕಾದ ಹಣ. ಸನ್ಮಾನ್ಯ ಶ್ರೀ ಅನಂತ್‌ನಾಗ್

ಅವರಿಗೆ ಒಂದು ವಿಚಾರ ಗೊತ್ತಿದೆ. ಬೆಂಗಳೂರು ಜಲಮಂಡಳಿಯ ಬೇರೆ ಕೊರತೆಗಳು, ಲೀಕೇಜಸ್ ಇದೆಲ್ಲಾ ಇದ್ದರೂ ಕೂಡ. ಇಡೀ ಭಾರತದಲ್ಲಿ ಒಂದು ಯುನಿಕ್ ಆರ್ಗನೈಸೇಷನ್ ಇದು. ಇಂದೂರು ಬಿಟ್ಟರೆ ಬೆಂಗಳೂರು ಕೆಳಗೆ ಇರುವ ನೀರನ್ನು ಪಂಪ್ ಮಾಡಿ ಮೇಲಕ್ಕೆ ತಂದು ಹಂಚುತ್ತಾ ಇರುವುದು. ಎಲ್ಲೂ ಕೂಡ ಗ್ರಾವಿಟಿಯಿಂದ ಬರುವುದಿಲ್ಲ. ನಮ್ಮದೇ ಇಂಜನಿಯರ್ಸ್ ಫಸ್ಟ್, ಸೆಕೆಂಡ್ ಮತ್ತು ಥರ್ಡ್ ಸ್ಟೇಜಿನ ವಿನ್ಯಾಸ ಮಾಡಿದ್ದು. ನಮ್ಮ ಹತ್ತಿರ ಹಣ ಇರಲಿಲ್ಲ. ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಹೇಳಿದ ಹಾಗೆ ವಿದೇಶಿ ಸಾಲ ಬೇಕಾಗಿತ್ತು. ಒ. ಎ. ಸಿ. ಎಫ್. ಹತ್ತಿರ ಹೋದರು. ಒ.ಎ.ಸಿ. ಎಫ್.ನವರು ಒಂದಿಷ್ಟು ಕಂಡೀಷನ್ಸ್ ಹಾಕಿದ್ದಾರೆ. ಸನ್ಮಾನ್ಯ ಪ್ರಕಾಶ್ ಅವರೇ, ಅದನ್ನು ನೋಡಿದರೆ ಗಾಬರಿಯಾಗುತ್ತದೆ. ಮೊದಲನೆಯದು ಏನು? 500 ಕೋಟಿ ರೂಪಾಯಿ ಇದ್ದಿದ್ದ ಎಸ್ಟಿಮೇಟನ್ನು 1092 ಕೋಟಿ ರೂಪಾಯಿಗೆ ಏರಿಸಿದ್ದಾರೆ. ಅದೇ 270 ಎಂ.ಜಿ.ಡಿ. ನೀರು. ಅದೇ ಕ್ವಾಂಟಿಟಿ ನೀರಿಗೆ 1092 ಕೋಟಿ ಜಾಸ್ತಿ ಮಾಡಿದರು. ಬಿಡಿ ಪರವಾಗಿಲ್ಲ. ಅದಕ್ಕಿಂತ ಎರಡನೆಯದು ನಾವು ಹೇಳಿದ ಕನ್‌ಸಲ್ಟೆನ್ಸಿಯನ್ನು ನೀವು ತೆಗೆದುಕೊಳ್ಳಬೇಕೆಂದು ಹೇಳಿದರು. ಇದುವರೆಗೆ ಕನ್‌ಸಲ್ಟೆನ್ಸಿಯನ್ನು ನಾವು ತೆಗೆದುಕೊಳ್ಳುತ್ತಿರಲಿಲ್ಲ. ಜಪಾನಿನ ಪಿ.ಸಿ.ಐ. ಯುನೈಟೆಡ್ ಕಿಂಗ್‌ಡಮ್‌ನ ಹೋಕ್‌ಮ್ಯಾಕ್ ಡೊನಾಲ್ಡ್, ಹಾಗೂ ಟಾಟಾ ಕನ್‌ಸಲ್ಟೆನ್ಸಿ, ಈ ಮೂರು ಸೇರಿ ಒಂದು ಕನ್‌ಸಾರ್ಟಿಯಂ. Do you know the fee the BWSSB has to copy? 40 ಕೋಟಿ ರೂಪಾಯಿ ಫೀಸ್ ಕೊಟ್ಟಿದ್ದೇವೆ. ಆ ಕನ್‌ಸಾರ್ಟಿಯಂಗೆ For what work? For the same design which we have been using for the 1st, 2nd and 3rd stages. ಅದನ್ನೇ ತೆಗೆದುಕೊಂಡು ಮೇಲುಗಡೆ ಸೀಲ್ ಹಾಕಿಬಿಟ್ಟು 40 ಕೋಟಿ ರೂಪಾಯಿ ಸಂಪಾದನೆ ಮಾಡುತ್ತಿದ್ದಾರೆ. ಅದೂ ಹೋಗಲಿ ಕೊಟ್ಟುಬಿಡೋಣ ಒನ್ ಟೈಮ್ ಪೇಮೆಂಟ್ ಎಂದು. ಒ.ಎ.ಸಿ. ಎಫ್ ನವರು ನೀವು 7 ಜನ ಪ್ರಾಜೆಕ್ಟ್ ಇಂಜನಿಯರ್‌ಗಳನ್ನು ತೆಗೆದುಕೊಳ್ಳಿ ಎಂದು ಹೇಳಿದರು. 4 ಜನ ಜಪಾನಿನವರು, 3 ಜನ ಇಂಗ್ಲೇಂಡಿನವರು. ಕಾಮಗಾರಿ ಇನ್ನೂ ಶುರು ಆಗಲಿಲ್ಲ. ಲ್ಯಾಂಡ್ ಅಕ್ವಿಸಿಷನ್ ಇನ್ನೂ ಶುರು ಆಗಿಲ್ಲ. ಆದರು ನೇಮಕಾತಿ ಮಾಡಿದ್ದೇವೆ. ಅವರ ಸ್ಯಾಲರಿ ಎಷ್ಟು ಗೊತ್ತಾ? ಒಬ್ಬೊಬ್ಬರಿಗೆ 6 ಲಕ್ಷ ರೂಪಾಯಿ ತಿಂಗಳಿಗೆ 42 ಲಕ್ಷ ರೂಪಾಯಿ ಕೊಡುತ್ತಿದ್ದೇವೆ 7 ಜನರಿಗೆ. ಯಾವ ಪುರುಷಾರ್ಥಕ್ಕೆ? ನಾವು ಇದನ್ನು ವಿದೇಶಿ ಸಾಲ ಎಂದು ಹೇಳುವುದೋ ವಿದೇಶಿ ಋಣ ಎಂದು ಹೇಳುವುದೋ? ಆ ಕೆಲಸವನ್ನು ಲೋಕಲ್ಲಾಗಿ ಬಾಂಡ್ಸ್ ತೆಗೆದುಕೊಂಡು ಮಾಡುವುದಕ್ಕೆ ಆಗುತ್ತಾ ಇರಲಿಲ್ಲವೇ? ಇನ್ನೂ ಎಷ್ಟು ಹೊರೆ ಮಾಡಬೇಕು. ಇನ್ನೂ ಎಷ್ಟು ಹುಟ್ಟುವ ಮಕ್ಕಳ ಮೇಲೆ ಬಡ್ಡಿ ಹಾಕಬೇಕು? ಅದಕ್ಕೋಸ್ಕರ ಸನ್ಮಾನ್ಯ ಅರ್ಥ ಸಚಿವರಲ್ಲಿ ಹೇಳುವುದು ಆದರೆ ಈ ರೀತಿ ಹೋಗಿ ಸಿಕ್ಕಿಹಾಕಿಕೊಳ್ಳತಕ್ಕ ಬಾರೋಯಿಂಗ್‌ಗೆ ಹೋಗಬಾರದು. I am giving you a telling example of how the whole bangalore has mesmerised by O.E.C.F

2001 ನೇ ಇಸವಿಯಲ್ಲಿ ನೀರುಕೊಡುತ್ತೇವೆ ಎಂದು ಹೇಳಿದಿರಲ್ಲಾ ಕೊಡುವುದಕ್ಕಾಗುತ್ತದೆಯೇ ಎಂದು ನಾವು ನೀವು ಅಕಸ್ಮಾತ್ ಇದ್ದರೆ ನೋಡೋಣ. ಆದರೆ ದುಡ್ಡಂತೂ ಕೊಡುತ್ತಿದ್ದೇವೆ. 40 ಕೋಟಿ ಮತ್ತು ತಿಂಗಳಿಗೆ 42 ಲಕ್ಷ ಕೊಡುತ್ತಿದ್ದೇವೆ. ಜೊತೆಗೆ We are insulting the BWSSB engineers who have their own designs. ಇದರ ಜೊತೆಗೆ ಇನ್ನೂ ಒಂದು ಕಂಡೀಷನ್ ಏನು? ಗ್ಲೋಬಲ್ ಟೆಂಡರ್ ಕರೆದ ಮೇಲೆ ಅವರು ಯಾರಿಗೆ ಹೇಳುತ್ತಾರೆ ಅವರಿಗೇ ಕೆಲಸ ಕೊಡಬೇಕು ಅವರು ಎಷ್ಟೇ ಪರ್ಸೆಂಟೇಜ್ ಇದ್ದರೂ ಕೂಡ. We have no say. ಇದೆಲ್ಲಾ ಆದ ಮೇಲೆ

ಬೆಂಗಳೂರು ನಗರದ ನಾಗರಿಕರು ತರಬಹುದಾದ ದರದಲ್ಲಿ ನೀವು ನೀರನ್ನು ಕೊಡುತ್ತೀರಾ? ಕೊಡುವುದಕ್ಕಾಗುತ್ತದೆಯೆ? ಅದನ್ನೂ ಕೂಡ ಒ.ಎ.ಸಿ. ಎಫ್. ಡಿಕ್ಟೇಟ್ ಮಾಡುತ್ತದೆ. ಅವರು ಹೇಳಿದ ದರಕ್ಕೆ ನೀರು ಕೊಡಬೇಕು. ಪ್ರಾಯಶ: ನಿಮಗೆ ಕಾವೇರಿ ನಾಲ್ಕನೇ ಸ್ಟೇಜಿನಲ್ಲಿ ಬರುವ ನೀರಿಗಿಂತ ಬಿಸ್ಲೇರಿ ನೀರೇ ಚೀಪ್ ಎಂದು ಅನ್ನಿಸಿದರೆ ಆಶ್ಚರ್ಯಪಡಬೇಕಾಗಿಲ್ಲ. ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಾ ವಿದೇಶಿ ವ್ಯಾಮೋಹವನ್ನು ಸ್ವಲ್ಪ ಕಡಿಮೆ ಮಾಡಿ ತಮ್ಮ ಆಡಳಿತದಲ್ಲಿ ನಾವೇ ಹಣವನ್ನು ಜನರೇಟ್ ಹೇಗೆ ಮಾಡಬಹುದು. ಎಕ್ಸ್‌ಪೆಂಡಿಚರ್‌ಗೆ ಹೇಗೆ ಕಡಿವಾಣ ಹಾಕುವುದು ಎಂಬ ಬಗ್ಗೆ ನಾವು ನೀವು ಯೋಚನೆ ಮಾಡಬೇಕು. ಈ ಸಂದರ್ಭದಲ್ಲಿ ಒಂದು ಸಮಸ್ಯೆ ಏನೆಂದರೆ ಬಹಳ ಸಾರಿ ನನಗನ್ನಿಸುವುದು ಈ ಸದನದಲ್ಲಿ ನೋಡಿದಾಗ We are not fighting against the problems. We are fighting against our adversaries in the other political parties. ನಾವು ಸಮಸ್ಯೆ ಹೇಳಿದತಕ್ಷಣ, ಮಾನ್ಯ ಮಲ್ಲಿಕಾರ್ಜುನ ಖರ್ಗೆ ಹೇಳಿದ ತಕ್ಷಣ ನೀವು ಹೇಳುತ್ತೀರಿ ನಿಮ್ಮ ಕಾಲದಲ್ಲಿ ನೀವು ಏನು ಮಾಡಿದಿರಿ ಎಂದು ನಿಮ್ಮ ಕಾಲದಲ್ಲಿ ನೀವು ಇದೇ ತಾನೇ ಮಾಡಿದ್ದು ಎಂದು ಕೂರಿಸುತ್ತೀರಿ. ನಾವೇನಾದರೂ ಎದ್ದುನಿಂತರೆ ನಿಮ್ಮ ಗುಜರಾತಿನಲ್ಲಿ ನಿಮ್ಮ ರಾಜಾಸ್ಥಾನದಲ್ಲಿ ಏನಾಯಿತು ಎಂದು ಹೇಳುತ್ತೀರಿ. ಹಿಗೆ ಹೇಳಿದರೆ ಯಾವುದೇ ಸಮಸ್ಯೆ ಕೂಡ ಪರಿಹಾರ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ನಮಗೇನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಿಮ್ಮ ಹತ್ತಿರ ಏನೂ ಇಲ್ಲ ಬಿಡಿ. ಆದ್ದರಿಂದ ನೀವು ಏನು ಹೇಳಿದರೂ ನಡೆಯುವುದಿಲ್ಲ.

ಶ್ರೀ ವಾಟಾಳ್ ನಾಗರಾಜ:- ನಮ್ಮ ಹತ್ತಿರ ಏನೂ ಇಲ್ಲವಂತೆ ನೋಡಿ. ಇದು ನಾನು ಒಪ್ಪುವುದಿಲ್ಲ. ಯಡಿಯೂರಪ್ಪ ಯಾವಾಗ ನೋಡಿದ್ದರು? ಇದೆಲ್ಲಾ ಸರಿಯಲ್ಲ ಹೇಳುವುದು.

ಶ್ರೀ ಸಿದ್ದರಾಮಯ್ಯ:- ಇದು ಬಹಳ ಡ್ಯಾಮೇಜಿಂಗ್ ಸ್ಟೇಟ್‌ಮೆಂಟ್.

ಶ್ರೀ ವಾಟಾಳ್ ನಾಗರಾಜ್ :- ಉಪಮುಖ್ಯಮಂತ್ರಿಗಳೂ ನಮ್ಮ ರಕ್ಷಣೆಗೆ ಬರುವುದಿಲ್ಲ. ಪ್ರಕಾಶ್ ಅವರೂ ಬರುವುದಿಲ್ಲ. ಏನು ಈ ತರಹ ಆದರೆ, ಹೀಗೆ ಹೇಳಿಬಿಟ್ಟರೆ ಯಡಿಯೂರಪ್ಪನವರು? ಯಡಿಯೂರಪ್ಪನವರು ಈ ರೀತಿ ಹೇಳಬಹುದಾ ಸ್ವಲ್ಪ ಹೇಳಿ ದಯವಿಟ್ಟು.

ಶ್ರೀ ಎಂ.ಪಿ. ಪ್ರಕಾಶ್ :- ಮುಂದೆ ಬರತಕ್ಕ ಚುನಾವಣೆಯಲ್ಲಿ ನಿಮ್ಮ ಪಕ್ಷವೇ ಅಧಿಕಾರಕ್ಕೆ ಬರುತ್ತವೆ, ನೀವೇ ಮುಖ್ಯಮಂತ್ರಿಗಳು ಎನ್ನುವ ಅರ್ಥದಲ್ಲಿ ಹೇಳಿದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ರಾಜಕೀಯವಾಗಿ ನೀವು ಒಬ್ಬಂಟಿಗರು. ಆದ್ದರಿಂದ ನೀವು ಏನು ಹೇಳಿದರೂ ಸೀರಿಯಸ್ಸಾಗಿ ತೆಗೆದುಕೊಳ್ಳುವುದಿಲ್ಲ ಎನ್ನುವ ಅರ್ಥದಲ್ಲಿ ನಾನು ಹೇಳಿದ್ದು.

ಶ್ರೀ ವಾಟಾಳ್ ನಾಗರಾಜ್:- ಅತ್ಯಂತ ಅಪಾಯಕಾರಿ ಹೇಳಿಕೆ ಇದು. ಇದೇ ಯಡಿಯೂರಪ್ಪನವರು ಹೇಳಿದ್ದಾರೆ ನೀವು ಮುಖ್ಯಮಂತ್ರಿಗಳಾದರೆ ನನ್ನ ಬೆಂಬಲ ಇದೆ ಎಂದು. ವರ್ಷಕ್ಕೊಂದು ಪ್ಲೇಟ್ ಬದಲಾವಣೆ ಮಾಡುತ್ತೀರಾ ಇಲ್ಲಿ? ಏತಕ್ಕೆ ಹೊಸ ರೆಕಾರ್ಡ್‌ಗಳನ್ನು ಸೃಷ್ಟಿ ಮಾಡುತ್ತಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಯಾರ ಸರ್ಕಾರ ಬಂದರೂ ಕೂಡ ಇವರ ಬೆಂಬಲ ಇದ್ದೇ ಇರುತ್ತದೆ. ಅದಕ್ಕೆ ಆ ಸರ್ಕಾರಗಳಲ್ಲಿ ಏನೇನು ಆಗುತ್ತದೆ ನೀವೇ ಹೊಣೆಗಾರರು. ನನ್ನದೇನೂ ಇಲ್ಲವೆಂದು ಹೇಳುವ ಹಾಗೆ ಇಲ್ಲ. ಎಲ್ಲವೂ ನಿಮಗೆ ಸೇರಿದ್ದು.

ಶ್ರೀ ವಾಟಾಳ್ ನಾಗರಾಜ್ :- ನನ್ನದು ಒಬ್ಬನದೇ ಅಲ್ಲ. ಕಾಂಗ್ರೆಸ್‌ನವರು ಹಣೆಬರವೂ ಇದೇ ಆಗಿದೆ. ಬೆಂಬಲ ಕೊಡುವುದು ಹಿಂದಕ್ಕೆ ತೆಗೆದುಕೊಳ್ಳುವುದು. ಈ ದೇಶದ ಹಣೆಯಬರಹವೇ ಈ ರೀತಿಯಾಗಿದೆ ಏನು ಮಾಡುವುದು?

ಶ್ರೀ ಎಸ್. ಸುರೇಶ್ ಕುಮಾರ್ :- ನಮ್ಮ ಹಿರಿಯ ನಾಯಕರು ಬಹಳ ವಿಚಾರವನ್ನು ವಾಟಾಳ್ ನಾಗರಾಜ್‌ರವರ ಬಗ್ಗೆ ಹೇಳಿದ್ದಾರೆ. ಅದನ್ನು ಅವರು ಡಿನೈ ಮಾಡಿದ್ದಾರೆ. How to believe it? ಒಂದು ಸದನ ಸಮಿತಿಯನ್ನು ಏಕೆ ಮಾಡಬಾರದು? ಅವರು ಎತ್ತಿರತಕ್ಕ ವಿಚಾರದ ಬಗ್ಗೆ ಇವರು ಡಿನೈ ಮಾಡಿದ್ದಾರೆ. ಅವರು ಅಸರ್ಟ್ ಮಾಡಿದ್ದಾರೆ. ದಯವಿಟ್ಟು ಒಂದು ಸದನಸಮಿತಿ ರಚನೆಯಾಗಬೇಕು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಯಡಿಯೂರಪ್ಪನವರು ಮುಂದೇ ಏನೇನೋ ಆಗಬೇಕೆಂದು ಆಸೆಯಿಟ್ಟುಕೊಂಡಿದ್ದಾರೆ, ನಮ್ಮ ಬೆಂಬಲ ಬೇಡವೆಂದರೆ ಬೇಡಬಿಡಿ. ಈಗ ಅವರ ಹಣೆಯಬರಹವನ್ನು ನೋಡಿದರೆ, ನಮ್ಮ ಬೆಂಬಲವಿಲ್ಲದೆ ಅವರು ಏನೂ ಆಗುವುದಕ್ಕೆ ಸಾಧ್ಯವಿಲ್ಲ. ಮತ್ತೊಂದು ಸಾರಿ ಚಿಂತನೆ ಮಾಡಲಿ. ಬಹಳ ಆಸೆಯನ್ನಿಟ್ಟುಕೊಂಡಿದ್ದಾರೆ. ಏನು ಈಶ್ವರಪ್ಪನವರೇ, ನಮ್ಮ ಬೆಂಬಲ ಬೇಕಾಗಿದೆ. ಇಲ್ಲವೆಂದರೆ ಬಿಟ್ಟು ಬಿಡಿ ನಿಮ್ಮ ಹಣೆಯಬರಹ.

ಶ್ರೀ ಕೆ. ಎಸ್. ಈಶ್ವರಪ್ಪ :- ಯಾರಾದರೂ ಮುಖ್ಯಮಂತ್ರಿಗಳಾಗುತ್ತಾರೆಂದರೆ ಆ ಮುಖ್ಯಮಂತ್ರಿಗಳಿಗೆ ವಾಟಾಳ್ ನಾಗರಾಜ್‌ರವರ ಬೆಂಬಲ ಇದ್ದೇ ಇರುತ್ತದೆ.

ಶ್ರೀವಾಟಾಳ್ ನಾಗರಾಜ್ :- ಬೆಂಬಲ ಬೇಡವೇ ಬೇಡ ಎಂದು ಬಹಿರಂಗವಾಗಿ ಹೇಳುತ್ತಾರೆ. ಆಮೇಲೆ ಇವರ ಬೆಂಬಲ ಇದ್ದೇ ಇರುತ್ತದೆಂದು ಅದು ಬೇರೆ ಹೇಳುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್ :- ನಾನು ವಿಶೇಷವಾಗಿ ಎಲ್ಲಾ ಅಂಶಗಳಿಗೆ ಹೋಗದೆ ಏಪ್ರಿಲ್ 15 ನೇ ತಾರೀಖಿನಿಂದ ಪ್ರತಿಯೊಂದು ಇಲಾಖೆಯ ಬಗ್ಗೆ ಚರ್ಚೆಯಿರುವ ಸಂದರ್ಭದಲ್ಲಿ ಮಾತನಾಡೋಣ. ನಾನು ಸ್ಥೂಲವಾಗಿ ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಬೆಂಗಳೂರು ಜಲಮಂಡಳಿಯವರ ಒಇಎಸಿಎಫ್ ಸಾಲದ ಹೊರೆ ಹೊರಬೇಕಾಗುತ್ತದೆಂದು ಸ್ವಲ್ಪ ಸ್ಟಡಿ ಮಾಡಿ ಮಾತನಾಡುತ್ತಿದ್ದಾರೆ. ನಿಮ್ಮ ಸ್ಟಡಿ ಪ್ರಕಾರ ಸಾಲವನ್ನು ಅಲ್ಲಿಂದ ತೆಗೆದುಕೊಳ್ಳದೆ ಹೋದರೆ ಆ ಯೋಜನೆಯನ್ನು ಎಷ್ಟು ದುಡ್ಡಿನಲ್ಲಿ ಪೂರ್ಣ ಮಾಡಬಹುದು ಎನ್ನುವುದನ್ನು ಹೇಳುತ್ತೀರಾ?

ಶ್ರೀ ಎಸ್. ಸುರೇಶ್ ಕುಮಾರ್ :- ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ವಾಟರ್ ಬೋರ್ಡ್‌ನವರು 500 ಕೋಟಿ ರೂಪಾಯಿಗಳನ್ನು ನಮ್ಮ ಲೋಕಲ್ ಮಾರ್ಕೆಟ್‌ನಲ್ಲಿ ರೈಸ್ ಮಾಡಬಹುದಿತ್ತು. ಮಹಾನಗರಪಾಲಿಕೆಯವರು 125 ಕೋಟಿ ಬಾಂಡ್ ರೈಸ್ ಮಾಡಿದ್ದಾರೆ. ಅದನ್ನು ಮಾಡಬಹುದಾಗಿತ್ತು. ಹಿಂದೆ ಎಲ್ ಐ ಸಿಯಲ್ಲಿ ಸಾಲ ತೆಗೆದುಕೊಂಡು ಮುಗಿಸಿದ್ದಾರೆ. ಕೆಲಸ ಕಾರ್ಯ ಮಾಡಲಿಕ್ಕೆ ಸಾಲ ಪಡೆದಾಗ ಫಸ್ಟ್ ಸ್ಟೇಜ್, ಸೆಕೆಂಡ್‌ಸ್ಟೇಜ್, ಥರ್ಡ್‌ಸ್ಟೇಜ್

ಸ್ಟೇಟ್ ಗೌರ್ನಮೆಂಟ್ ಗ್ಯಾರಂಟಿ ಇತ್ತು. 500 ಕೋಟಿ ರೂಪಾಯಿಯಲ್ಲಿ ಮಾಡುವ ಕೆಲಸಕ್ಕೆ 1092 ಕೋಟಿ ಕೊಡಬೇಕಾಗುತ್ತದೆಂದು ನನ್ನ ಅನಿಸಿಕೆ. ನಾನು ವಿಶೇಷವಾಗಿ ಎಲ್ಲಾ ಇಲಾಖೆಗೆ ಹೋಗದೆ, ಮಾನ್ಯ ಅರ್ಥಸಚಿವರು ಮಾತನಾಡುತ್ತ, ತೋಟಗಾರಿಕೆ ಇಲಾಖೆಯ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಗ್ಯಾಟ್ ನಿಂದ ಆದಹಾಗೆ ಇನ್ನೊಂದು ಆಘಾತ.

ಶ್ರೀ ಕಾಗೋಡು ತಿಮ್ಮಪ್ಪ :- ಅದು ಏನಾಗಿದೆಯೋ ನಮಗೆ ಗೊತ್ತಿಲ್ಲ. ಇವರ ಇಲಾಖೆಯಲ್ಲಿ ವಿಶ್ವಬ್ಯಾಂಕಿನಿಂದ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರು ಕೊಡಲಿಕ್ಕೆ ಸಾಲ ತೆಗೆದುಕೊಳ್ಳುತ್ತಾರೆ. ವಿಶ್ವಬ್ಯಾಂಕಿನವರು ಹಾಕಿರುವ ಷರತ್ತಿನ ಪ್ರಕಾರ ಯಾವ್ಯಾವ ಎಜೆನ್ಸಿಗಳಿಗೆ ಹಣ ಕೊಡಬೇಕೆಂದು ಮಾಡಿದ್ದಾರೆ. ಅದು ಹಾಗೆಯೇ ಇದೆಯಾ?

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಸುರೇಶ್ ಕುಮಾರ್ ರವರು ಹೇಳಿದ ಮಾತು ಅದಕ್ಕೆ ಸ್ಪಷ್ಟವಾದ ಹೋರಾಟ ಮಾಡಿದರೆ ಸಾಧ್ಯತೆಯಾಗುತ್ತದೆ. ವಿಶ್ವಬ್ಯಾಂಕ್ ಯೋಜನೆಯಲ್ಲಿ ಅವರು ಈ ತರಹ ನಿಬಂಧನೆಗಳನ್ನು ಹಾಕಿದ್ದಾರೆ. ಆದರೆ ನಾವು ಆ ಷರತ್ತುಗಳನ್ನು ವಿರೋಧ ಮಾಡಿ ಅವುಗಳನ್ನು ಚಿಕ್ಕ ಚಿಕ್ಕ ಸ್ಲೈಸಸ್ ಮಾಡಬೇಕೆಂದು, ಪ್ರೀಟೆಂಡರ್ ಸಿಸ್ಟಮ್ ತೆಗೆದು ಹಾಕಿ, ಪೋಸ್ಟ್ ಟೆಂಡರ್ ಸಿಸ್ಟಮ್ ತರಬೇಕು. ಮತ್ತೆ ಬೇರೆ ಯಾರಿಗೆ ಬೇಕಾದರೂ ಕೊಟ್ಟು 40 ಪರ್ಸೆಂಟ್ ಗಿಂತ ಹೆಚ್ಚಾಗುವ ಸಂದರ್ಭವಿದ್ದರೆ, ಹೆಚ್ಚಾಗಿದ್ದರೆ ರಿಜೆಕ್ಟ್ ಮಾಡುತ್ತೇವೆಂದು ಈ ತರಹ ಷರತ್ತುಗಳನ್ನು ಹೇಳಿದ ಮೇಲೆ ಅವರು ಒಪ್ಪಿಕೊಂಡಿದ್ದಾರೆ. ಸ್ವಲ್ಪ ಇದನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗಿದೆ. ಇಷ್ಟಾದರೂ ಕೂಡ 80 ಕೋಟಿ ಉಳಿಸಿದ್ದೇವೆ. 500 ಕೋಟಿ ರೂಪಾಯಿ ಒಟ್ಟು ನಮ್ಮ ವ್ಯವಸ್ಥೆಯಲ್ಲಿ ಈಗ 80 ಕೋಟಿ ಗಳನ್ನು ಉಳಿಸಿದ್ದೇವೆ. ಇದೇ ರೀತಿಯಲ್ಲಿ ಅವರು ಯೋಚನೆಯನ್ನು ಮಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಒ.ಇ.ಸಿ. ಎಫ್ ಅವರ ಷರತ್ತುಗಳು ಏನಿವೆ, ಅವುಗಳಿಗೆ ಹೇಳಿದ ಷರತ್ತುಗಳನ್ನು ಒಪ್ಪಿದಾಗ ಏನು ಪರಿಣಾಮವಾಗುತ್ತದೆ ಅದುಬಹಳ ಮುಖ್ಯವಲ್ಲವೇ? 42 ಲಕ್ಷ ಎಕ್ಸಪರ್ಟ್ಸ್‌ಗಳಿಗೆ ಸ್ಯಾಲರಿ, 40 ಕೋಟಿ ಕನ್ಸಲ್ಟೇಷನ್ ಫೀಸ್ ಕೊಡಬೇಕು. ಮತ್ತೆ 500 ಕೋಟಿ ಬದಲು 592 ಕೋಟಿ ಜಾಸ್ತಿಯಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ರೆಡ್ಡಿಯವರೇ, ಒಂದು ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ನಾವು ಸಂಪನ್ಮೂಲ ಇಲ್ಲದೆ ಬೇರೆ ಕಡೆಯಿಂದ ಸಾಲ ತರುವಂತಹ ಪರಿಸ್ಥಿತಿ ಇದ್ದಾಗ ಎಷ್ಟು ಇಕ್ಕಟ್ಟಿಗೆ ಸಿಲುಕುತ್ತೇವೆ ಎನ್ನುವುದೇ ಅವರ ಮಾತು. ಒಂದು ಕಡೆ ಈಗಿರತಕ್ಕ ಸಂಪನ್ಮೂಲಗಳ ಮೂಲಕ ಬೆಳೆಯುತ್ತಿರುವ ನಗರಕ್ಕೆ ನೀರನ್ನು ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಬೇರೆ ಕಡೆಯಿಂದ ನಾವು ಸಾಲವನ್ನು ತರುತ್ತಿದ್ದೇವೆ. ಸಾಲ ತೆಗೆದುಕೊಳ್ಳುವಾಗ ನಾವು ಯಾವ ರೀತಿಯ ಇಬ್ಬದಿಯ ಕಿಲಿಗೆ ಒಳಗಾಗುತ್ತಿದ್ದೇವೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾವು ಸಾಲಕ್ಕೆ ಹೋದಮೇಲೆ ಅವರು ಹಾಕಿದ ಶರತ್ತುಗಳನ್ನು ಒಪ್ಪಲೇಬೇಕಾದ ಅನಿವಾರ್ಯತೆ ಏರ್ಪಡಿಸುತ್ತದೆ. ಅನಿವಾರ್ಯದಿಂದ ನಾವು ಏನಾದರೂ ಶರತ್ತುಗಳನ್ನು ಒಪ್ಪಿದಾಗ ಎಷ್ಟು ಅಪಾಯ ಕಾದಿದೆ ಎನ್ನುವುದು ಬಹಳ ಮುಖ್ಯವಾದ ಅಂಶ. ಯಾವುದೇ ವಿದೇಶಿ ಸಾಲಕ್ಕೆ ಹೋದಾಗ ಅವರು ಹಾಕತಕ್ಕ ಶರತ್ತುಗಳಿವೆ. ನಾಳೆ ಮಾಡುವ ಮತ್ತೊಂದು ಕೆಲಸಕ್ಕೆ

ಇದೇ ಪರಿಸ್ಥಿತಿ ಬರುತ್ತದೆ. ಯಾವುದೇ ವಿದೇಶಿ ಸಾಲಕ್ಕೆ ಹೋದರೆ ಇದೇ ಪರಿಸ್ಥಿತಿ ಬರುತ್ತದೆ. ವಿದೇಶಿ ಸಾಲ ಪಡೆದಾಗ ಹೆಚ್ಚು ಹೊರೆ ಬೀಳಬಾರದೆಂದು ಹೇಳುತ್ತೇನೆ.

ಶ್ರೀ ಎನ್. ರಾಜಣ್ಣ :- 1971-72 ರಲ್ಲಿ ಕಾವೇರಿ ಫಸ್ಟ್ ಸ್ಟೇಜ್ ಕೆಲಸ ಶುರು ಮಾಡಿದಾಗ ಮುಗ್ದಂ ಎಂಬುದು ಚೀಫ್ ಇಂಜಿನಿಯರ್ ಇದ್ದರು, ಅವರು ಕಾಲದಲ್ಲಿ ಬಹಳಷ್ಟು ಜನ ಎಕ್ಸ್‌ಪರ್ಟ್ಸ್ ಇದ್ದರು ನಿವೃತ್ತಿ ಹೊಂದಿದವರು. ಅವರ ಕಾಲದಲ್ಲಿ ಕಾವೇರಿ ಫಸ್ಟ್ ಸ್ಟೇಜ್‌ಗೆ 65 ರಿಂದ 70 ಕೋಟಿ ಸೆಕೆಂಡ್ ಸ್ಟೇಜ್‌ಗೆ 280 ಕೋಟಿ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅರ್ಥಸಚಿವರು ನಮ್ಮ ರಾಜ್ಯದ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ತೋಟಗಾರಿಕೆಯ ಬಗ್ಗೆ ಹೇಳಿದ್ದಾರೆ. ಅವರು ಹೇಳಿರುವ ರೀತಿಯಲ್ಲಿ ಯಾವುದೇ ಸಂಶಯವಿಲ್ಲ. Infact Bangalore was considered to be the capital of Indian Floriculture. ದೇಶದ ಒಟ್ಟು ಹೂವುಗಳು ಏನು ರಫ್ತಾಗುತ್ತಿವೆ. ಅದರಲ್ಲಿ ಶೇಕಡ 70 ರಷ್ಟು ಹೂವುಗಳು ಬೆಂಗಳೂರು ಮತ್ತು ಸುತ್ತಮುತ್ತಲಿನವರು ಕೊಡುತ್ತಿದ್ದಾರೆ. ಅದರಲ್ಲಿ ಏನು ಆಘಾತವಾಗಿದೆ ಅಂದರೆ ಪೇಟೆಂಟ್ ಹೆಸರಿನಲ್ಲಿ ಇವತ್ತು ಫ್ಲಾರಿಕಲ್ಚರ್ ವೃತ್ತಿಗೆ ದೊಡ್ಡ ಧಕ್ಕೆ ಬಂದಿದೆ. ಫೆಬ್ರವರಿ 14 ನೇ ತಾರೀಖು ವ್ಯಾಲೆಂಟೈನ್ಸ್ ಡೇ, ಆ ದಿನ ಬೆಂಗಳೂರಿನಿಂದ ಲಕ್ಷಾಂತರ ಬೆಲೆಬಾಳುವ ಗುಲಾಬಿ ಹೂವುಗಳನ್ನು ಫ್ರಾನ್ಸ್‌ಗೆ ಕಳುಹಿಸಿದ್ದಾರೆ. ಅದನ್ನೆಲ್ಲಾ ರಿಜೆಕ್ಟ್ ಮಾಡಿ ವಾಪಸ್ಸು ಕಳುಹಿಸಿದ್ದಾರೆ. ಬೆಳೆದವರ ಗತಿ ಏನಾಗಬೇಕು? ಅವರು ಹೇಳಿದ್ದು ಇದು ಗುಲಾಬಿ ಅಲ್ಲ, ಇದು ನಕಲಿ ಗುಲಾಬಿಯೆಂದು ಹೇಳಿದ್ದಾರೆ. ಏಕೆಂದರೆ ಪೇಟೆಂಟ್ ನಮ್ಮ ಹತ್ತಿರವಿದೆ. ಆ ಗುಲಾಬಿಯನ್ನು ನಾವು ಕಳುಹಿಸುತ್ತಿರುವುದು Indian Long Stem Rose ಎಂದು ಅದರ ಬಗ್ಗೆ ನಮ್ಮಲ್ಲಿ ಬ್ರೀಡರ್ ಲೈಸೆನ್ಸ್ ಇಲ್ಲದಿರುವುದರಿಂದ ಇವತ್ತು ಫ್ಲಾರಿಕಲ್ಚರ್ ಗೋರಿಕಲ್ಚರ್ ಆಗುತ್ತಿದೆ. ಯಾವುದರಿಂದ ರಾಜ್ಯಕ್ಕೆ ಹಣ ಬರಬೇಕಾಗಿತ್ತು, ಆದಾಯ ಹೆಚ್ಚಾಗಬೇಕಾಗಿತ್ತು ಇವತ್ತು ಆ ಕ್ಷೇತ್ರದ ಪಾಲಿಗೆ ಒಂದು ಭಯಂಕರವಾದ ಪರಿಸ್ಥಿತಿ ಬರುತ್ತಿದೆ. ಇದರ ಬಗ್ಗೆ ನಾನು ರಾಜ್ಯ ಸರ್ಕಾರವನ್ನು ಕೇಳುವುದು ಈ ಕ್ಷೇತ್ರದ ಕಡೆಗೆ ತುರ್ತಾಗಿ ನೀವು ಗಮನಹರಿಸಿ, ಒಂದು ರೀತಿ ಕೋಲಾರದ ಚಿನ್ನದ ಗಣಿ ಮುಚ್ಚಿದರೂ ಕೂಡ ಇನ್ನೊಂದು ಚಿನ್ನದ ಗಣಿ ಬಂದಿದೆ ಫ್ಲಾರಿಕಲ್ಚರ್ ಮೂಲಕ ಬಂದಿದೆ. ಇದನ್ನು ಉಳಿಸುವುದಕ್ಕೆ ತಕ್ಷಣ ಕಾರ್ಯಕ್ರಮವನ್ನು ಹಾಕಿಕೊಳ್ಳದಿದ್ದರೆ, ನೀವು ಎಚ್ಚೆತ್ತುಕೊಳ್ಳದಿದ್ದರೆ ಇದೊಂದು ಕ್ಷೇತ್ರ ನಮ್ಮ ಪಾಲಿಗೆ ಮುಚ್ಚಿ ಹೋಗುತ್ತದೆ.

ಇನ್ನು ಮಾನ್ಯ ಗೋವಿಂದೇಗೌಡರು ಪ್ಯಾರಾ 59 ರಲ್ಲಿ ಶಿಕ್ಷಣದ ಬಗ್ಗೆ ಹೇಳಿದ್ದಾರೆ. ಮಾನ್ಯ ಗೋವಿಂದೇಗೌಡರ ಬಗ್ಗೆ ಇಡೀ ಸದನದ ಸದಸ್ಯರ ವಿಶ್ವಾಸವಿದೆ. ಅವರು ಬಹಳ ಒಳ್ಳೆಯ ಸಚಿವರು. ಗೋವಿಂದೇಗೌಡರಿಗೆ ಅವರ ಬಗ್ಗೆ ಅವರಿಗೆ ವಿಶ್ವಾಸವಿದೆಯೆ? ಇದು ಪ್ರಶ್ನೆ. ಅವರಿಗೆ ಅವರು ಅಂದುಕೊಂಡಿದ್ದನ್ನೆಲ್ಲಾ ಮಾಡುತ್ತೇವೆನ್ನುವ ವಿಶ್ವಾಸವಿದೆಯೇ? ಈಗ ಏನಾಗಿದೆ ಅಂದರೆ ನಾವು ಶಿಕ್ಷಣಕ್ಕೆ ಮತ್ತು ಆರೋಗ್ಯಕ್ಕೆ ಎಷ್ಟು ಆದ್ಯತೆಯನ್ನು ಕೊಡಬೇಕೋ ಅದನ್ನು ಕೊಡದೆ ಹಾಗೆಯೇ ನಡೆಸಿಕೊಂಡು ಹೋಗುತ್ತಿದ್ದೇವೆ. ನನಗೆ ಚೆನ್ನಾಗಿ ಜ್ಞಾಪಕವಿದೆ. ನಮ್ಮ ರಾಜ್ಯದ ಸಚಿವರೊಬ್ಬರು ಹೇಳಿದ್ದಾರೆ, ಶಿಕ್ಷಣ ಇಲಾಖೆ ಅನುತ್ಪಾದಕ ನಾನ್‌ಪ್ರೊಡಕ್ಟೀವ್ ಸೆಕ್ಟಾರ್ ಎಂದು ಹೇಳಿದರು. ಇನ್‌ಕಂ ಬರುವುದಿಲ್ಲ ಪ್ರಾಫಿಟ್ ಬರುವುದಿಲ್ಲ ಅದಕ್ಕೋಸ್ಕರ ನಾನ್‌ಪ್ರೊಡಕ್ಟೀವ್ ಸೆಕ್ಟಾರ್ ಎಂದು ಹೇಳಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಯಾರು ಎಂದು ಹೆಸರು ಹೇಳಿಬಿಡಿ.

ಶ್ರೀ ಎಸ್. ಸುರೇಶ್ ಕುಮಾರ್ :- ಬೇಡ. ಆ ರೀತಿ ಹೇಳುವುದರಿಂದ ನಾವು ಕೂಡ ಅದೇ ದಿಕ್ಕಿನಲ್ಲಿ ಹೋಗುತ್ತಿದ್ದೇವೆ. ಶಾಲಾ ಕಟ್ಟಡ ಶಿಕ್ಷಕರ ಕೊರತೆ ಇದೆ. ನಾವು ಶಿಕ್ಷಣಕ್ಕೆ ಎಷ್ಟು ಆದ್ಯತೆಯನ್ನು ಕೊಡಬೇಕೋ ಅದನ್ನು ಕೊಡುತ್ತಿಲ್ಲ. ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಬೇರೆ ದೇಶಗಳಲ್ಲಿ ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಉದಾಹರಣೆಗೆ ಫ್ರಾನ್ಸ್‌ನಲ್ಲಿ, ಪ್ರಧಾನಮಂತ್ರಿಯಾದ ನಂತರ ನೆಕ್ಸ್ಟ್ ಇಂಪಾರ್ಟೆಂಟ್ ಮಿನಿಸ್ಟರ್ ಎಜ್ಯುಕೇಷನ್. ನಮ್ಮಲ್ಲಿ 6ನೆಯದು 7ನೆಯದು ಅದನ್ನು ಎಣಿಸಿ ಕೊಂಡು ಬರಬೇಕು. ನಾನು ಒಬ್ಬರು ಬೆಂಗಳೂರಿನ ಖ್ಯಾತ ಅನೇಕ ಶಾಲಾಕಾಲೇಜುಗಳನ್ನು ನಡೆಸತಕ್ಕವರ ಜೊತೆಯಲ್ಲಿ ಮಾತನಾಡಿದೆ. ಇವತ್ತು ಸರ್ಕಾರಿ ಕಾಲೇಜುಗಳ ಸ್ಥಿತಿ ಎಲ್ಲರಿಗೂ ಗೊತ್ತಿದೆ. ಖಾಸಗಿ ಶಾಲಾಕಾಲೇಜುಗಳ ಬಗ್ಗೆ ನಾವೆಲ್ಲರೂ ಗದಾಪ್ರಹಾರ ಮಾಡುತ್ತೇವೆ. ಇವತ್ತು ಯಾರೂ ತಮ್ಮ ಮಕ್ಕಳನ್ನು ಸರ್ಕಾರಿ ಕಾಲೇಜುಗಳಿಗೆ ಕಳುಹಿಸುವುದಕ್ಕೆ ತಯಾರಿಲ್ಲ. ಅದಕ್ಕೆ ಸರ್ಕಾರದ ವೈಫಲ್ಯದ ನೀತಿಯೇ ಕಾರಣ. ಒಂದು ಆಧುನಿಕ ವರ್ಣಾಶ್ರಮ ಧರ್ಮವನ್ನು ನಾವು ಸೃಷ್ಠಿ ಮಾಡುತ್ತಿದ್ದೇವೆ. ಸರ್ಕಾರಿ ಶಾಲಾಕಾಲೇಜುಗಳಿಗೆ ಹೋಗುವವರು ಅಟೆಂಡರ್ ಪೀವನ್ ಬೆಸ್ಟ್ ಅಂದರೆ ಕ್ಲರ್ಕ್ ಆಗಬಹುದು. ಖಾಸಗಿ ಶಾಲಾಕಾಲೇಜುಗಳಿಗೆ ಹೋಗುವವರು ಅಡ್ವೊಕೇಟ್ ಮತ್ತು ಕ್ಲರ್ಕ್‌ಗಳಾಗಬಹುದು. ಎಲೈಟ್ಸ್ ಶಾಲಾಕಾಲೇಜುಗಳಿಗೆ ಹೋಗುವವರು ಐ ಎ ಎಸ್, ಐಪಿ ಎಸ್, ಐ ಎಫ್ ಎಸ್ ಆಗಬಹುದು. ಈ ರೀತಿಯ ಆತಂಕ ವರ್ಣಾಶ್ರಮಧರ್ಮವನ್ನು ನಾವು ಮಾಡುತ್ತಿದ್ದೇವೆ. ಅದನ್ನು ಕೊನೆಗಾಣಿಸುವುದಕ್ಕೆ ಯಾವುದೇ ಸರ್ಕಾರವಿರಬಹುದು ಅಥವಾ ನಾವು ಯಾರ‍್ಯಾರು ಜವಾಬ್ದಾರಿ ಸ್ಥಾನದಲ್ಲಿದ್ದೇವೆ, ಇರುವವರು ಎಲ್ಲರೂ ಸೇರಿ if you do not take a positive step at this juncture, there is going to be a catastrophe in future. ಮುಂದೆ ಬಹಳ ಅನಾಹುತವಾಗುತ್ತದೆ, ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಸರ್ಕಾರಕ್ಕೆ ನನ್ನ ಮತ್ತೊಂದು ಸಲಹೆ ಏನೆಂದರೆ, ಇವತ್ತು ಶಿಕ್ಷಣ ಮತ್ತು ಸರ್ಕಾರದ ನಂಟು ಸ್ವಲ್ಪ ಕಡಿಮೆ ಆಗಬೇಕು. ಸರ್ಕಾರವು ಶಿಕ್ಷಕರ ನೇಮಕಾತಿ, ವರ್ಗಾವಣೆ, ಕಟ್ಟಡ, ಎಲ್ಲಾ ಸರ್ಕಾರವೇ ಮಾಡುತ್ತಿದೆ. ಇದನ್ನು ನಿಲ್ಲಿಸಬೇಕು. ಏಕೆಂದರೆ, ನಮ್ಮ ದೇಶದಲ್ಲಿ ಚುನಾವಣೆ ಆಯೋಗ ಇದೆ. ಇದಕ್ಕೆ ಸರ್ಕಾರದ ನಂಟಿಲ್ಲ. ಈ ಆಯೋಗ ಮಾಡಿದ ತೀರ್ಪಿನ ವಿರುದ್ಧ ಯಾರು ಅಪೀಲ್ ಕೂಡ ಹೋಗುವುದಕ್ಕೆ ಆಗುವುದಿಲ್ಲ. ಇದೇ ಮಾದರಿಯಲ್ಲಿ why not we attempt to create an Education Commission making it an autonomous body? ಎಲ್ಲಾ ಜಿಲ್ಲೆಗಳಲ್ಲಿ ಸ್ವಾಯತ್ತ ಸಂಸ್ಥೆ ಮಾಡಿ, ಅವರೇ ಶಿಕ್ಷಕರ, ನೇಮಕಾತಿ, ಸಿಲಬಸ್ ಮಾಡುವುದಕ್ಕೆ ಅವಕಾಶವಿರಬೇಕು. ನಾನು ವಿಶ್ವವಿದ್ಯಾನಿಲಯಗಳ ಬಗ್ಗೆ ಮಾತನಾಡುತ್ತಿಲ್ಲ. ನಾನು ಪ್ರಾಥಮಿಕ ಶಿಕ್ಷಣ ಮತ್ತು ಹೈಯರ್ ಎಜ್ಯುಕೇಷನ್ ಬಗ್ಗೆ ಮಾತನಾಡುತ್ತಿದ್ದೇನೆ. ಇಂದು ಶಿಕ್ಷಣ ಇಲಾಖೆ ರಾಜಕೀಯ ಒತ್ತಡಕ್ಕೆ ಸಿಲುಕಿ ಒದ್ದಾಡುತ್ತಿದೆ. ಇದಕ್ಕೆ ನನ್ನ ಸಲಹೆ ಏನೆಂದರೆ You may take it or reject it like many other things. ಇದಕ್ಕಾಗಿ ಒಂದು ಶಿಕ್ಷಣ ಆಯೋಗಕ್ಕೆ, ಅದು ಕನ್‌ಕರೆಂಟ್ ಸಬ್ಜೆಕ್ಟ್ ಆಗಿರುವುದರಿಂದ, ಕೇಂದ್ರ ಸರ್ಕಾರದ ಜೊತೆ ಮಾತನಾಡಿ, ದೇಶಕ್ಕೆ ಉತ್ತಮ ಶಿಕ್ಷಣ ದೊರೆಯುವ ನಿಟ್ಟಿನಲ್ಲಿ ಸರ್ಕಾರ ದಿಟ್ಟವಾದ ಹೆಜ್ಜೆ ಇಡಬೇಕು. ತಂದೆ-ತಾಯಿಗಳ ಆದಾಯದ ಮೇಲೆ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಕೊಡುವುದನ್ನು ಕೊನೆಗಾಣಿಸಬೇಕು. My parents income is deciding my fate. ಕೊನೆಪಕ್ಷ ಪ್ರಾಥಮಿಕ ಶಿಕ್ಷಣದ ಮಟ್ಟದಲ್ಲಾದರೂ ಸಮಾನತೆ ದೊರೆಯುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಅದರ ಮೇಲೆ ಅವರವರ ಯೋಗ್ಯತೆ, ಅರ್ಹತೆ ಅವಕಾಶಗಳಿಗನುಗುಣವಾಗಿ ವ್ಯಾಸಾಂಗ ಮಾಡಲಿ.

ಇದರ ಬಗ್ಗೆ ಸರ್ಕಾರ ಸ್ವಲ್ಪ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮಾನ್ಯ ಅರ್ಥಸಚಿವರು ಆರೋಗ್ಯದ ಬಗ್ಗೆ ಮಾತನಾಡುತ್ತಾ ಒಳ್ಳೆಯ ಅಂಶವನ್ನು ಗುರುತಿಸಿದ್ದಾರೆ. ಅದು ಏನೆಂದರೆ, '' ಪೋಲಿಯೋ ನಿರ್ಮೂಲನೆಗಾಗಿ ನಡೆಸಿದ ವಿಶೇಷ ಪ್ರಯತ್ನ ಅತ್ಯಂತ ಯಶಸ್ವಿಯಾಗಿರುವುದು ಸಂತೋಷದ ಸಂಗತಿಯಾಗಿದೆ'' ಇದು ನಿಜ. '' ಪೋಲಿಯೋ ಅಭಿಮಾನ'' ಏಕೆ ಯಶಸ್ವಿಯಾಯಿತು? ಇದಕ್ಕೆ ಏನು ಕಾರಣ ಎಂದರೆ, ಇದು ಸರ್ಕಾರದ ಕಾರ್ಯಕ್ರಮ ಆಗಿರಲಿಲ್ಲ. ಸರ್ಕಾರದ ಕಾರ್ಯಕ್ರಮ ಆಗಿದ್ದರೆ ಅನೇಕ ಯೋಜನೆಗಳು ಮೂಲೆಗೆ ಸೇರಿದ ಹಾಗೆ ಆಗುತ್ತಿತ್ತು. ಈ ಒಂದು ಅಭಿಮಾನ ಯಶಸ್ವಿಯಾಗಬೇಕಾದರೆ, ಖಾಸಗಿ ವೈದ್ಯರುಗಳು, ಸ್ವಯಂಸೇವಾ ಸಂಸ್ಥೆಗಳು ಇದರಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡರು.

Sri.Siddaramaiah :-It was a Government's programme with the participation of voluntary agencies.

Sri S.Suresh Kumar :- It was a Government programme but ಕೆಲಸ ಮಾಡಿದವರು ಯಾರು? ಇದನ್ನು ಇಂಪ್ಲಿಮೆಂಟ್ ಮಾಡಿದವರು ಯಾರು? ಉದಾಹರಣೆಗೆ ಹೇಳುವುದಾದರೆ ಖಾಸಗಿ ವೈದ್ಯರುಗಳು, ಸ್ವಯಂಸೇವಾಸಂಸ್ಥೆಗಳು, ಬೆಳಿಗ್ಗೆ 7-00 ಕ್ಕೆ ಅಭಿಮಾನದಲ್ಲಿ ಪಾಲ್ಗೊಂಡಿದ್ದವು. ಆದರೆ ಅದೇ ನಿಮ್ಮ ಸರ್ಕಾರಿ ನೌಕರರು ಬೆಳಿಗ್ಗೆ 8-30ಕ್ಕೆ ಕೆಲವು ಕಡೆ ಇನ್ನೂ ಈ ಕಾರ್ಯಕ್ರಮವನ್ನು ಆರಂಭಿಸಿರಲಿಲ್ಲ. ಕೇವಲ ಸಂಬಳಕ್ಕೋಸ್ಕರ ಕೆಲಸ ಮಾಡದೇ ಯೋಜನೆ ಯಶಸ್ವಿಯಾಗಬೇಕು, ಸಮಾಜಕ್ಕೆ ಇದರಿಂದ ಲಾಭವಾಗಬೇಕು, ಮುಂದೆ ಸಮಾಜದಲ್ಲಿ ಪೋಲಿಯೋ ಪೀಡಿತರ ಮಕ್ಕಳು ಇರಬಾರದು ಎನ್ನುವ ಒಂದು ಒಳ್ಳೆಯ ಸದುದ್ದೇಶದಿಂದ ಈ ಕಾರ್ಯಕ್ರಮವನ್ನು ಯಶಸ್ವಿಯನ್ನಾಗಿಸಿದರು. ಇದನ್ನು ನಾವು ಶಿಕ್ಷಣ ಕ್ಷೇತ್ರಕ್ಕೆ ಆರೋಗ್ಯದ ಕ್ಷೇತ್ರಕ್ಕೆ ಹರಡಬೇಕಾದ ಅವಶ್ಯಕತೆ ಇದೆ. ರಾಜ್ಯದಲ್ಲಿ 2480 ಆಸ್ಪತ್ರೆಗಳು ಇವೆ ಎಂದು ಯಾವುದೋ ಒಂದು ಸಂದರ್ಭದಲ್ಲಿ ಮಾನ್ಯ ಸಚಿವರು ಉತ್ತರಿಸಿದ್ದಾರೆ. ಒಂದು ವರ್ಷಕ್ಕೆ ಔಷಧಿಗೋಸ್ಕರವಾಗಿ ಖರ್ಚು ಮಾಡುವ ಹಣ 49 ಕೋಟಿ.ರೂ.ಗಳು ಸುಮಾರು ಮೂರು -ನಾಲ್ಕು ವರ್ಷಗಳಿಂದ ಇದೇ ಅಂಕಿಸಂಖ್ಯೆಗಳನ್ನು ತೋರಿಸುತ್ತಿದ್ದಾರೆ. ಔಷಧಿಗಳ ಬೆಲೆ ಇವತ್ತು ಗಗನಕ್ಕೆ ಏರಿರುವ ಸತ್ಯಸಂಗತಿ ನಮಗೆಲ್ಲರಿಗೂ ಗೊತ್ತಿದೆ. ಈ 49 ಕೋಟಿ.ರೂ.ಗಳು ಇವತ್ತಿನ ಪರಿಸ್ಥಿತಿಯಲ್ಲಿ ಸಾಕಾಗುತ್ತಿದಿಯೇ? ಹಣ ಖರ್ಚು ಮಾಡುವುದರ ಜೊತೆಗೆ ಆರೋಗ್ಯ ಇಲಾಖೆಯಿಂದ ಇದರ ಮೇಲೆ ನಿಯಂತ್ರಣ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಸರ್ಕಾರಿ ಆಸ್ಪತ್ರೆಗಳಲ್ಲಿ ದೊರೆಯುವ ಔಷಧಿಗಳು ಪಕ್ಕದಲ್ಲಿರುವ ಮೆಡಿಕಲ್ ಸ್ಟೋರ್ಸ್ ಗಳಿಗೆ ಸರಬರಾಜಾಗುತ್ತಿರುವ ವಿಷಯಕ್ಕೆ ಸರ್ಕಾರ ಏನಾದರೂ ಕಾರ್ಯಕ್ರಮವನ್ನು ರೂಪಿಸಿದೆಯೇ? ಏಕೆಂದರೆ, You have a control. ಸರ್ಕಾರಿ ಆಸ್ಪತ್ರೆಗಳಿಗೆ ಹೊಟ್ಟೆನೋವು, ಕಣ್ಣು ನೋವು ಎಂದು ಬರುವ ಬಡವರಿಗೆ ಔಷಧಿಗಳು ಇಲ್ಲವೆಂದು ಚೀಟಿ ಬರೆದು ಕೊಡುವುದು, ಬೆಡ್‌ಗೆ ಕಾಸು ತೆಗೆದುಕೊಳ್ಳುವುದು, ಇವೆಲ್ಲಾ ಅಮಾನವೀಯ ಕೆಲಸಗಳನ್ನು ನಾವು ದಿನನಿತ್ಯ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ, ಹಾಗೂ ಕಣ್ಣಾರೆ ನೋಡುತ್ತಿದ್ದೇವೆ. ಆದ್ದರಿಂದ ಸರ್ಕಾರ ಹಣವನ್ನು ಖರ್ಚು ಮಾಡುವುದಷ್ಟೆಲ್ಲದೇ ಅದನ್ನು ಯೋಗ್ಯ ರೀತಿಯಲ್ಲಿ ಖರ್ಚು ಮಾಡಲಾಗುತ್ತಿದೆಯೇ ಎಂಬುದರ ಬಗ್ಗೆ ವಿಶೇಷ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ಈ ಭಾಷಣದಲ್ಲಿ '' ಜಯದೇವ ಹೃದ್ರೋಗ'' ಆಸ್ಪತ್ರೆಯ ಬಗ್ಗೆ ಹೇಳಿದ್ದಾರೆ. ಇವತ್ತು ಈ ಆಸ್ಪತ್ರೆ ಬಹಳ ಒಳ್ಳೆಯ ಕೆಲಸ ಮಾಡುತ್ತಿದೆ. ಇದನ್ನು ಸ್ಥಳಾಂತರಿಸುವ ಮೊದಲು ನನ್ನ ಕೋರಿಕೆ ಏನೆಂದರೆ, ಒಂದು ತುರ್ತು ಚಿಕಿತ್ಸಾ ಘಟಕವನ್ನು

ವಿಕ್ಟೋರಿಯಾ ಆಸ್ಪತ್ರೆಯ ಈಗಿರುವ ಆವರಣದಲ್ಲಿಯೇ ಮುಂದುವರಿಸಿದರೆ ಒಳ್ಳೆಯದು. ಏಕೆಂದರೆ ಊರು ಹೊರ ವಲಯಕ್ಕೆ ಕರೆದುಕೊಂಡು ಹೋಗುವ ಪೂರ್ವದಲ್ಲಿ ರೋಗಿಗಳಿಗೆ ಇಲ್ಲಿ ಅಡ್ಮಿಟ್ ಮಾಡಿ ಈ ತುರ್ತು ಚಿಕಿತ್ಸಾ ಘಟಕದಲ್ಲಿ ಪ್ರಥಮ ಚಿಕಿತ್ಸೆಯನ್ನು ಜಮಾಮಾಡಿ ನಂತರ ಆಸ್ಪತ್ರೆಗೆ ಸಾಗಿಸಬಹುದು. ಆದ್ದರಿಂದ ಇದನ್ನು ಈಗಿರುವ ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿಯೇ ಮುಂದುವರಿಸುವ ಬಗ್ಗೆ ಸರ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬಹಳ ಪ್ರಾಮುಖ್ಯವಾದ ಅಂಶ ಏನೆಂದರೆ ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ. '' ಸರ್ಕಾರವು 62.09 ಕಿ. ಮೀ. ಉದ್ದದ ಬೆಂಗಳೂರು ಹೊರವರ್ತುಲ ರಸ್ತೆ ನಿರ್ಮಾಣದ ಮಹತ್ವಾಕಾಂಕ್ಷೆಯ ಯೋಜನೆಯನ್ನು ಕೈಗೆತ್ತಿಕೊಂಡಿದೆ . ಇದರಲ್ಲಿ 13.86 ಕಿ. ಮೀ ರಸ್ತೆಯನ್ನು ಈಗಾಗಲೇ ನಿರ್ಮಿಸಲಾಗಿದೆ. ಉಳಿದ ಕಾಮಗಾರಿ ಕೈಗೊಳ್ಳಲು ನಾವು ಹಣಕಾಸು ಸಂಸ್ಥೆಗಳಿಂದ 180 ಕೋಟಿ ರೂ. ಗಳನ್ನು ಸಂಗ್ರಹಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿ ಎ) ಅನುಮತಿ ನೀಡಿದ್ದೇವೆ. ಕೋರಮಂಗಲ ಮತ್ತು ಇಂದಿರಾನಗರವನ್ನು ಕೂಡಿಸುವ ಸಂಪರ್ಕ ವರ್ತುಲ ರಸ್ತೆ 1998ರ ಡಿಸೆಂಬರ್ ವೇಳೆ ಪೂರ್ಣವಾಗಲಿದೆ'' ಇದನ್ನು ಓದಿದಾಗ ನನಗೆ ಏನು ಅನ್ನಿಸುತ್ತದೆ ಎಂದರೆ, ಮೊನ್ನೆ ಲೋಕಸಭಾ ಚುನಾವಣೆಯಲ್ಲಿ ಆಡಳಿತರೂಢ ಸರ್ಕಾರದ ವಿರುದ್ಧ ಜನರು ಮತ ಚಲಾಯಿಸಿದ್ದಾರೆ ಎಂದು ಮಾತನಾಡುತ್ತಿದ್ದರು. ಇದು ನಿಜ. ನಮ್ಮ ಜನರು ಪಕ್ಷಗಳನ್ನು, ಅಭ್ಯರ್ಥಿಗಳನ್ನು ಸೋಲಿಸಿ, ಅಧಿಕಾರದಿಂದ ಕೆಳಗೆ ಇಳಿಸುತ್ತಾರೆ. ಇದಕ್ಕೆ ಕೇವಲ ಪಕ್ಷಗಳೇ ಕಾರಣವೇ ಅಥವಾ ಮಂತ್ರಿಗಳೇ ಕಾರಣವೇ? ಕಳೆದ 25 ವರ್ಷಗಳಿಂದ ಒಂದೇ ಜಾಗದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ಪಾತ್ರ ಏನು? ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮಲ್ಲಿ ಏನು ಪ್ರಾವಿಷನ್ ಇದೆ? ಇದಕ್ಕೆ ಉತ್ಕೃಷ್ಟವಾದ ಒಂದು ಉದಾಹರಣೆ ಏನೆಂದರೆ, ವರ್ತುಲ ರಸ್ತೆಯ ನಿರ್ಮಾಣ ಮಾಡುವುದರ ಬಗ್ಗೆ. ಈ ವರ್ತುಲ ರಸ್ತೆಯ ನಿರ್ಮಾಣ ಯಾವಾಗ ಆರಂಭವಾಯಿತು? ಈ ಯೋಜನೆ 1972 ರಲ್ಲಿ ಒಡಿಪಿ ಪ್ರಕಾರ i.e., Outline Development Plan 1972 ರಲ್ಲಿ ವರ್ತುಲ ರಸ್ತೆ ಮಾಡಬೇಕೆಂದು ಇದೆ. The Ring Road proposal was initiated. 1947 ರಲ್ಲಿ ಬಿಡಿ ಎ ರಚನೆಯಾಯಿತು. ನಂತರ That O.D.P became the CDP i.e., Comprehensive Development Plan. ಪುನ: ಸಿಡಿಪಿಯನ್ನು 1995 ರಲ್ಲಿ ರಿವೈಸ್ ಮಾಡಿದರು. ಆದರೆ ಇವತ್ತು 1998ರ ಡಿಸೆಂಬರ್ ಅಂತ್ಯದಲ್ಲಿ ಈ ಯೋಜನೆಯನ್ನು ಮುಗಿಸುತ್ತೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಬಹುಶ: ಮಾನ್ಯ ಸಚಿವರಿಗೆ ಖಚಿತವಾದ ಮಾಹಿತಿ ಇಲ್ಲ. ಅಥವಾ ಸಚಿವರಿಗೆ ಬೇಕೆಂದೇ ತಪ್ಪು ಮಾಹಿತಿ ಕೊಟ್ಟಿರಬಹುದು. ಖಂಡಿತ 1998ರೊಳಗೆ ಈ ವರ್ತುಲ ರಸ್ತೆಯನ್ನು ಮುಗಿಸುವುದಕ್ಕಾಗುವುದಿಲ್ಲ. ಕಾರಣ ಏನು ಗೊತ್ತೋ? 1982 ರಲ್ಲಿ ಕೋರಮಂಗಲ-ಇಂದಿರಾನಗರದ್ದು ನೂರು ಅಡಿ ರಸ್ತೆ ಮಾಡುತ್ತೇವೆಂದು ಒಂದು ಅಧಿಸೂಚನೆಯನ್ನು ಹೊರಡಿಸಿದ್ದರು. ಈ ಅಧಿಸೂಚನೆ ಏನಾಗಿದೆ ಎಂದು ಯಾರೂ ಉತ್ತರ ಕೊಡುತ್ತಿಲ್ಲ. 1982 ರಲ್ಲಿ ವರ್ತುಲ ರಸ್ತೆ ನಿರ್ಮಾಣ ಮಾಡುತ್ತೇವೆ. 1984ರಲ್ಲಿ the BDA issues total notification for complete layouts including this Ring Road area. ಯಾವುದನ್ನು ವರ್ತುಲ ರಸ್ತೆ ಮಾಡಬೇಕೆಂದು ಇದ್ದರೋ ಅದನ್ನು ಕೂಡ ಸೈಟ್‌ಗಳನ್ನಾಗಿ ಮಾಡುತ್ತೇವೆಂದು, ಹಾಗೂ ಸೈಟ್‌ಗಳನ್ನಾಗಿ ವಿಂಗಡಿಸುತ್ತೇವೆಂದು ಒಂದು ಅಧಿಸೂಚನೆಯನ್ನು ಕೊಟ್ಟರು. ಬಿಡಿ ಎಗೆ ಎಡಕೈಯಲ್ಲಿ ಮಾಡಿರುವುದು ಬಲಗೈಗೆ ಗೊತ್ತಾಗುವುದಿಲ್ಲ. ಅಥವಾ ಎರಡೂ ಕೈಗಳು ಸೇರಿ ಮಾಡುತ್ತವೆಯೋ ನನಗಂತೂ ಗೊತ್ತಿಲ್ಲ. 1989ರಲ್ಲಿ ಲೇ ಔಟ್ ಮಾಡುತ್ತೇವೆಂದು

final Notification was issued. ಹೀಗಿದ್ದರೂ ಇದುವರೆವಿಗೆ ಅವಾರ್ಡ್ ಎನ್ನುವುದು ಪಾಸ್ ಆಗಿಲ್ಲ. ಈಗ 1998, ಅಂದರೆ 9 ವರ್ಷವಾಯಿತು, ಇನ್ನೂ ಅವಾರ್ಡ್ ಪಾಸ್ ಆಗಿಲ್ಲ. ಹೀಗಿದ್ದರೂ ನೀವು ಯಾವ ರೀತಿ ವರ್ತುಲ ರಸ್ತೆಯನ್ನು ನಿರ್ಮಾಣ ಮಾಡುತ್ತೀರಿ? ಹೈಕೋರ್ಟ್‌ನವರು ನಮಗೆ ಆದೇಶ ಕೊಟ್ಟಿದ್ದಾರೆ, ಹೀಗಾಗಿ ನಾವು 98 ರೊಳಗೆ ಮುಗಿಸುತ್ತೇವೆಂದು ಹೇಳಬಹುದು. Judicial Activism ನಿಂದ ಇಷ್ಟಾದರೂ ಉಪಯೋಗವಾಗುತ್ತಿದೆ ಎಂದು ನಾವು ಸಂತೋಷ ಪಡಬಹುದು. Because of lapses of these BDA officers, we are compelled to pay compensation and alternate sites for unauthorised people. ಜಸ್ಟೀಸ್ ವಿಶ್ವನಾಥ್ ಶೆಟ್ಟಿಯವರು ಹೈಕೋರ್ಟ್‌ನಲ್ಲಿ ಒಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. 1984 ರಲ್ಲಿ ಇವರು ಅಧಿಸೂಚನೆ ಮಾಡಿದರು, ಅಲ್ಲಿ ಬಂದಿರುವ unauthorised structures ಗಳಿಗೆ ನೀವು ಅಲಫ ಮಾಡುವುದರಿಂದ ಅವರಿಗೆ ಇವತ್ತು ಪರಿಹಾರ ಕೊಡಬೇಕು. ಅವಾರ್ಡ್ ಪಾಸ್ ಆಗಿಲ್ಲ, ಪರಿಹಾರಧನ ಕೊಡದೇ ಇದ್ದಲ್ಲಿ ಅವರನ್ನು ಅಲ್ಲಿಂದ ಖಾಲಿ ಮಾಡಿಸುವುದಕ್ಕಾಗುವುದಿಲ್ಲ. ಇದರಿಂದಾಗಿ ನೀವು ವರ್ತುಲ ರಸ್ತೆಯನ್ನು ಮಾಡುವುದಕ್ಕಾಗುವುದಿಲ್ಲ. This is not a Ring Road. It is a noose around Bangaloreans. ಬೆಂಗಳೂರಿನ ಜನಕ್ಕೆ ನೀವು ಕತ್ತಲಲ್ಲಿ ಹಾಕುತ್ತಿರುವ ನೇಣು. ಇದಕ್ಕಾಗಿ 1972 ರಿಂದ 1998 ನೇ ಇಸವಿಯವರೆಗೆ ಒಂದು ವರ್ತುಲ ರಸ್ತೆಯನ್ನು ನಿರ್ಮಾಣ ಮಾಡುವುದಕ್ಕೆ ಆಗದೇ ಇರುವಂಥ ಅಧಿಕಾರಗಳ ಮೇಲೆ ಏನು ಕ್ರಮವನ್ನು ತೆಗೆದು ಕೊಂಡಿದ್ದೀರಿ? Is there any accountability? ಆ ಅಕೌಂಟಬಿಲಿಟಿ ಇಲ್ಲದೇ ಇರುವುದರಿಂದ ಬಿ. ಡಿ. ಎ. ಈ ಪರಿಸ್ಥಿತಿಗೆ ಬಂದಿರುವುದು. ಇದು ಬಿ.ಡಿ.ಎ. ಮಾತ್ರ ಅಲ್ಲ, ರಾಜ್ಯದ ಯಾವುದೇ ಇಲಾಖೆಯನ್ನು ತೆಗೆದುಕೊಂಡರೂ ಕೂಡ ಇದೇ ಪರಿಸ್ಥಿತಿ ಇದೆ. ನೀವು ನಾವು ಒಂದು ಯೋಜನೆಯನ್ನು ಹಾಕಿಕೊಳ್ಳುತ್ತೇವೆ. ಅದೇ ರೀತಿ ಯೋಜನೆಯನ್ನು ಮಾಡುತ್ತೇವೆ ಎಂದು ನೋಡುತ್ತೀರಾ? ಏಕೆಂದರೆ ನೀವು ಹೋದ ಮೇಲೆ ಇನ್ನೊಬ್ಬರು ಬರುತ್ತಾರೆ. ನಿಮ್ಮನ್ನು ಬಯ್ಯುವುದರಲ್ಲಿ ಅವರು ಸಮಯ ಕಳೆಯುತ್ತಾರೆ. ನಿಮ್ಮ ನಿಮ್ಮ ಜಗಳದಲ್ಲಿ - there are merrying ಅದಕ್ಕೋಸ್ಕರ ತಾವು ಈ ಬ್ಯೂರೋಕ್ರಸಿ- ಅಧಿಕಾರಶಾಹಿಯನ್ನು ಒಂದು ನಿಯಂತ್ರಣದಲ್ಲಿ ಇಡಲಿಕ್ಕೆ ನಿಮ್ಮ ಭಾಷಣದಲ್ಲಿ ಯಾವುದೇ ರೀತಿಯ ಹುಮ್ಮಸ್ಸೂ ಕಂಡಿಲ್ಲ. ನಾನು ಆವಾಗಲೇ ಹೇಳಿದ ಹಾಗೆ 1994 ರಲ್ಲಿ ಇದ್ದಂಥ ಸಿದ್ಧರಾಮಯ್ಯನವರು ಬೇರೆ, 1998 ನೇ ಇಸವಿಯಲ್ಲಿ ಇರುವ ಸಿದ್ಧರಾಮಯ್ಯನವರು ಬೇರೆ. ಆ ಉತ್ಸಾಹ ಇವತ್ತು ಕಡಿಮೆಯಾಗಿದೆ, ಛಲ ಕಡಿಮೆಯಾಗಿದೆ, ಕೆಚ್ಚು ಕಡಿಮೆಯಾಗಿ ಒಂದು ರೀತಿ ಜರ್ಝರಿತರಾಗಿ ಬಿಟ್ಟಿದ್ದಾರೆ. ಆಡಳಿತ ಪಕ್ಷದ ವಿಧ್ಯಮಾನಗಳಿಂದ ಒಂದು ರೀತಿಯ ಜರ್ಝರಿತರಾಗಿ ಆ ಉತ್ಸಾಹ ಇವತ್ತು ನಿಮ್ಮಲ್ಲಿ ಕಾಣಿಸುತ್ತಿಲ್ಲ. ಅದು ಹೇಗೆ ಎಂದರೆ ಈ ಬೆಂಗಳೂರಿನಿಂದ ಮೈಸೂರಿಗೆ ಒಂದು ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇದು ಏನಾಯಿತು ಎಂದರೆ, 1993 ರಲ್ಲಿ ಅವರಿಗೆ ನಿಮ್ಮ ಸಪೋರ್ಟ್ ಇತ್ತು. ಆವಾಗ ಒಂದು ಭಯ ಇತ್ತು. ಈಗ ಅವರದ್ದೇ ಸಪೋರ್ಟ್‌ನಿಂದ ಅವರು ಮೇಲೆ ಬಂದಿದ್ದಾರೆ. ಮತ್ತೆ ನೀವು ಆ ಕಡೆ ಈ ಕಡೆ ಸ್ವಲ್ಪ ಜರುಗಿ ಕೊಳ್ಳುತ್ತಿದ್ದೀರಿ. ಅದಕ್ಕೇ ಸ್ವಲ್ಪ ತಾಪತ್ರಯವಾಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಖರ್ಗೆಯವರೇ, ನಮ್ಮ ಸಪೋರ್ಟ್ ಇದ್ದರೆ ಸರ್ಕಾರ ಚೆನ್ನಾಗಿ ಇರುತ್ತದೆ ಎಂದು ಸರ್ಟಿಫಿಕೇಟ್ ಕೊಟ್ಟಿದ್ದೀರಲ್ಲಾ, ಅದಕ್ಕೆ ಧನ್ಯವಾದ. ಪ್ಯಾರಾ 116 ರಲ್ಲಿ

ನೀವು ಗೃಹ ಮತ್ತು ಸಾರಿಗೆ ಬಗ್ಗೆ ಮಾತನಾಡುತ್ತಾ ಅನೇಕ ಸಂಗತಿಗಳನ್ನು ಹೇಳಿದ್ದೀರಿ. ನಿಮ್ಮ ಆಡಳಿತ ಬಗ್ಗೆ ನನಗೆ ನೋವಾಗುವುದು, ನೋವಿನಿಂದ ಕೂಡಿದ ನಗುಬರುವುದು ಈ ಪೋಲೀಸ್ ಇಲಾಖೆ ಬಗ್ಗೆ ಈ ಪೋಲೀಸ್ ಇಲಾಖೆ ಹತ್ತಿರ ದುಡ್ಡು ಇರಲಿಲ್ಲ. ದುಡ್ಡು ಇಲ್ಲದೇ ಇರುವಾಗ ಏನಾಯಿತು? ಏನಾಯಿತು ಎಂದರೆ, ಸ್ವಯಂಸೇವಾಸಂಸ್ಥೆಗಳು ವಾಹನಗಳನ್ನು ಕೊಟ್ಟರು. ಯೆಲ್ಲೋಪೇಜಸ್, ಗೆಟ್ ಇಟ್ ಮುಂತಾದವರು ಎಲ್ಲಾ ವಾಹನಗಳನ್ನು ಕೊಟ್ಟರು. ಎಷ್ಟು ವಾಹನಗಳನ್ನು ಕೊಟ್ಟರು? ನನಗೆ ಬಂದಿರುವ ಮಾಹಿತಿ ಪ್ರಕಾರ ಪೋಲೀಸ್ ಇಲಾಖೆಯಲ್ಲಿ ಸುಮಾರು 600 ವಾಹನಗಳೂ ಇವೆ. ಜೀಪುಗಳ ಎಲ್ಲಾ ಇವೆ. ಒಂದು ಬಹಳ ಸ್ವಾರಸ್ಯ ಎಂದರೆ ಈ 600 ವಾದಹದನಗಳೂ ಕೂಡ ಓಡುತ್ತಿಲ್ಲ. ಏಕೆಂದರೆ ನಿಮಗೆ ಅದಕ್ಕೆ ರಿಜಿಸ್ಟ್ರೇಷನ್ ಮಾಡುವುದಕ್ಕೆ ದುಡ್ಡು ಕೊಟ್ಟಿಲ್ಲ. ಟೆಂಪರರಿ ರಿಜಿಸ್ಟ್ರೇಷನ್ ಟೈಮ್ ಮುಗಿದುಹೋಯಿತು. ರಿಜಿಸ್ಟ್ರೇಷನ್ ದುಡ್ಡು ಕೊಟ್ಟಿಲ್ಲದೇ ಇರುವುದರಿಂದ 600 ವಾಹನಗಳು ಗ್ರೌಂಡ್ ಆಗಿ ನಿಂತಿವೆ. ನಿಮ್ಮ ಪೋಲೀಸ್ ಇಲಾಖೆಯಿಂದ ಏನಾದರೂ ಮಾಡುವುದಕ್ಕೆ ಸಾಧ್ಯ ಇದೆಯಾ? ನೀವು ಕಳ್ಳರನ್ನು ಹಿಡಿಯುತ್ತೀರಾ?

ಇಷ್ಟೆಲ್ಲಾ ಹೇಳುತ್ತಾ ಇನ್ನೊಂದು ವಿಷಯವೆಂದರೆ, ಬೆಂಗಳೂರು ಜನರ ಮೇಲೆ ಒಂದು ಹೇರಿಕೆಯನ್ನು ಮಾಡಿದ್ದೀರಿ. ಅದು 151 ರಲ್ಲಿದೆ. ಸ್ಟಾಂಪ್ ಡ್ಯೂಟಿ ಬಗ್ಗೆ ಒಂದು ಪ್ರಸ್ತಾಪ ಮಾಡಿದ್ದೀರಿ. ನಮಗೆ ಗೊತ್ತು ಇಡೀ ದೇಶದಲ್ಲಿ ಹೈಯೆಸ್ಟ್ ಸ್ಟಾಂಪ್ ಡ್ಯೂಟಿ ಕೊಡುತ್ತಿರುವುದು ನಾವು, ಕರ್ನಾಟಕದವರು. ನೀವು ಸ್ಟಾಂಪ್ ಡ್ಯೂಟಿಯದ್ದೇ ಒಂದು ಅನಾಲಿಸೀಸ್ ಮಾಡಿ. ಇದಕ್ಕೋಸ್ಕರ ಬೇರೆ ಕಡೆಗೆ ಹೋಗಿ ರಿಜಿಸ್ಟ್ರೇಷನ್ ಮಾಡಿಸುತ್ತಾರೆ ಎಂಬುದು ನಮಗೆ ಗೊತ್ತಿದೆ. ಈಗ ನೀವು ಗುತ್ತಿಗೆ ಪತ್ರ ಮೇಲೆ ಪವರ್ ಆಫ್ ಅಟಾರ್ನಿ ಮೇಲೆ ಕೂಡ ಶುಲ್ಕವನ್ನು ವಿಧಿಸುತ್ತಿದ್ದೀರಿ. ತಾವು ಕೂಡ ವಕೀಲರು. ಪವರ್ ಆಫ್ ಅಟಾರ್ನಿ ಯಾವುದೂ ಕೂಡ ಇರ್ರಿವೋಕೇಬಲ್ ಪವರ್ ಆಫ್ ಅಟಾರ್ನಿ ಅಲ್ಲ. It can be rovoked. ನಾನು ಒಂದು ಪವರ್ ಆಫ್ ಅಟಾರ್ನಿ ತೆಗೆದುಕೊಂಡು ಅದ್ಯಾವುದೋ ಕನ್ಸಿಡರೇಷನ್ ಮೇಲೆ ನೀವು ಹೇಳಿದ ತರಹ ಮಾರ್ಕೆಟ್ ವ್ಯಾಲ್ಯುಮೇಲೆ ನಾನು ಸ್ಟಾಂಪ್ ಡ್ಯೂಟಿ ಕೊಟ್ಟು ರಿಜಿಸ್ಟ್ರೇಷನ್ ಮಡಿಸಿಕೊಂಡರೆ, ಆ ಪುಣ್ಯಾತ್ಮ ಬಂದು ಅದನ್ನು ರಿವೋಕ್ ಮಾಡಿದರೆ ನನ್ನ ಕತೆ ಏನು? ಆದ್ದರಿಂದ ಈ ಎಚ್ಚರಿಕೆಯನ್ನು ಮನಸ್ಸಿನಲ್ಲಿ ತೆಗೆದುಕೊಂಡು ನೀವು ಇರ್ರಿವೋಕೇಬಲ್ ಎಂದು ಯಾವುದಾದರೂ ಪ್ರಾವಿಷನ್ ಅನ್ನು ತಂದು ಇದಕ್ಕೆ ನೀವು ರಕ್ಷಣೆ ಕೊಡಬೇಕು. ಒಟ್ಟಾರೆ ಈ ರಿಜಿಸ್ಟ್ರೇಷನ್ ಕತೆ ಏನಾಗುತ್ತದೆ ಎಂದು ನಮಗೆ ಗೊತ್ತಿಲ್ಲ. ರಿಜಿಸ್ಟ್ರೇಷನ್ ಇವತ್ತು ಆಗುವುದು ಮಾರ್ಕೆಟ್ ವ್ಯಾಲ್ಯು ಮೇಲೆ ಎಂದು ಹಾಕಿದ್ದೀರಿ. ಇದು ಬಹಳ ಮುಖ್ಯವಾದ ಪ್ರಶ್ನೆ. ಪವರ್ ಆಫ್ ಅಟಾರ್ನಿ ಇರ್ ರಿವೋಕೇಬಲ್ ಮಾಡುವುದಕ್ಕೆ ಬರುವುದಿಲ್ಲ.

ಛೇರ್‌ಮನ್ :- ಪರ್ವ ಆಫ್ ಅಟಾರ್ನಿ ಇರ್ರಿವೋಕೇಬಲ್ ಮಾಡುವುದಕ್ಕೆ ಬರುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :- ಇರ್ರಿವೋಕೇಬಲ್ ಪವರ್ ಆಫ ಅಟಾರ್ನಿ ಕಾನೂನಿನ ಪ್ರಕಾರ ಇದೆ.

ಶ್ರೀ ಎಸ್. ಸುರೇಶ್ ಕುಮಾರ್ :- ಸನ್ಮಾನ್ಯ ಅರ್ಥಸಚಿವರು ತಮಗೆ ಇದ್ದ ಒಂದು ಅವಕಾಶವನ್ನು ಇವತ್ತು ಕಳೆದುಕೊಂಡು ಜನರಿಗೆ ಅಧಿಕಾರ ಮತ್ತು ಹಿತಕೊಡುವುದರಲ್ಲಿ ವಿಫಲರಾಗಿದ್ದಾರೆ. ನಾಲ್ಕು ವರ್ಷಗಳ ಅನುಭವ ಕೂಡ ಇವತ್ತು ಅವರ ಸಹಾಯಕ್ಕೆ ಬಂದಿಲ್ಲ. ದಯವಿಟ್ಟು ಈ ಬಜೆಟ್‌ನಲ್ಲಿ ನೀವು ಏನೇನು ಅಂಶಗಳನ್ನು ಹೇಳಿದ್ದೀರಿ, ಅದನ್ನು ದಯವಿಟ್ಟು ತಿದ್ದಿಕೊಳ್ಳಿ . ಇಲ್ಲದಿದ್ದರೆ

ಅನಿವಾರ್ಯವಾಗಿ ನಾವು ಈ ಬಜೆಟ್‌ನ್ನು ವಿರೋಧಿಸಬೇಕಾಗುತ್ತದೆ. ಯಾವುದೇ ರೀತಿಯ ಜನಹಿತ ಅಂಶಗಳು ಇದರಲ್ಲಿ ಕಾಣುತ್ತಿಲ್ಲ. ನಿಮಗೆ ಸಿಕ್ಕ ಒಂದು ಸುವರ್ಣಾವಕಾಶವನ್ನು ತಾವು ಕಳೆದುಕೊಂಡಿದ್ದೀರಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

★ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ) :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯ ಮಂತ್ರಿಗಳೂ ಹಾಗೂ ಅರ್ಥಸಚಿವರು ಈ ರಾಜ್ಯಕ್ಕೆ ನೀಡಿರತಕ್ಕಂಥ ಈ 1998-99 ನೇ ಸಾಲಿನ ಆಯವ್ಯಯ ಬಗ್ಗೆ ಮಾತನಾಡುವಂಥ ಒಂದು ಅವಕಾಶವನ್ನು ನನಗೆ ಕಲ್ಪಿಸಿಕೊಟ್ಟಿರುವುದಕ್ಕೆ ಮೊದಲನೆಯದಾಗಿ ತಮ್ಮನ್ನು ವಂದಿಸುತ್ತ, ಒಟ್ಟಾರೆ ಒಂದೇ ಮಾತಿನಲ್ಲಿ ನಾನು ಅವರ ಆಯವ್ಯಯವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ಒಬ್ಬನ ಸಮಾಜವಾದಿ ಚಿಂತನೆ, ಸಮಾಜವಾದಿ ಹೋರಾಟದ ಹಿನ್ನಲೆ ಇರತಕ್ಕಂಥ ಈ ರಾಜ್ಯದ ಅರ್ಥ ಸಚಿವರಾಗಿ ಮೂರು ವರ್ಷಗಳ ಅನುಭವ ಇದ್ದು, ನಾಲ್ಕನೇ ವರ್ಷಕ್ಕೆ ಆಯವ್ಯಯವನ್ನು ಕೊಟ್ಟಿರತಕ್ಕಂಥ ಒಬ್ಬ ಅನುಭವಿ ಮಂತ್ರಿ ಎಂತಹ ಒಂದು ಉತ್ತಮವಾದ ಆಯವ್ಯಯವನ್ನು ಕೊಡಬಹುದಾಗಿತ್ತೋ ಅದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎನ್ನತಕ್ಕಂಥ ಮಾತನ್ನು ನಾನು ನೋವಿನಿಂದ ಹೇಳಬೇಕಾಗುತ್ತದೆ. ಏಕೆಂದರೆ ಇದು ಬಹಳ ಕಷ್ಟವಾದ ಕೆಲಸ. ಆದರೆ ಇದು ಸತತವಾಗಿ ನಿಮಗೆ ಒಂದು- ಎರಡು - ಮೂರು ವರ್ಷ ಆದರೂ ಕೂಡ ಈ ರಾಜ್ಯಕ್ಕೆ ಒಂದು ಒಳ್ಳೆಯ ಬಜೆಟ್‌ನ್ನು ಕೊಡತಕ್ಕಂಥ ಕೆಲಸ ಕಷ್ಟವಾಗುವುದಕ್ಕೆ ಸಾಧ್ಯ ಇರಲಿಲ್ಲ. ಆದರೂ ಕೂಡ ತಾವು ಏಕೋ ನಾಲ್ಕನೇ ವರ್ಷದ ಬಜೆಟ್‌ನ್ನು ಕೊಡುತ್ತಾ ಇಡೀ ರಾಜ್ಯದ ಎಲ್ಲಾ ವರ್ಗದ ಜನ ಇದನ್ನು ನೀರಸವಾದ ಬಜೆಟ್, ಏನೂ ಪ್ರಗತಿ ಕಾಣುತ್ತಿಲ್ಲ, ಇದರಲಿ ರಾಜ್ಯವನ್ನು ನಾನಾ ರಂಗಗಳಲ್ಲಿ ಮುನ್ನಡೆ ಸಾಧಿಸತಕ್ಕಂಥ ಅಂಶಗಳ ಕೊರತೆ ಇದೆ, ಎಂದು ಈ ಆಯವ್ಯಯ ಬಗ್ಗೆ ಹೇಳತಕ್ಕಂಥ ಸಾರ್ವತ್ರಿಕವಾದ ಅಭಿಪ್ರಾಯ ವ್ಯಕ್ತವಾಗಿದೆ. ಇದನ್ನು ತಮ್ಮ ಮೂಲಕ ಮಾನ್ಯ ಅರ್ಥಸಚಿವರ ಗಮನಕ್ಕೆ ತರುತ್ತದೆ. ಆದರೆ ಒಂದನ್ನು ಅವರು ಕಾಪಾಡಿ ಕೊಂಡಿದ್ದಾರೆ. ಅದು ಅವರ ಜಾಣತನವೋ ಅಥವಾ ಜಾಣತನದ ಕೊರತೆಯೋ ಗೊತ್ತಿಲ್ಲ. ಈ ರಾಜ್ಯದ ಒಂದು ಸ್ಟೇಟಸ್ಕೋವನ್ನು ಕಾಪಾಡಿಕೊಂಡು ಬಂದಿದ್ದಾರೆ. ಒಂದು ಗಾದೆ ಹೇಳುತ್ತಾರೆ; ಆರಕ್ಕೆ ಹತ್ತಲಿಲ್ಲ, ಮೂರಕ್ಕೆ ಇಳಿಯಲಿಲ್ಲ ಎಂದು. ಇವರು ಮೂರಕ್ಕೆ ಇಳಿಯುವುದು ಬೇಕಾಗಿರಲಿಲ್ಲ. ಆರಕ್ಕೆ ಹತ್ತುವಂಥ ಪ್ರಯತ್ನ ಕೂಡ ಈ ಆಯವ್ಯಯದ ಮೂಲಕ ಅವರು ನೋಡುವುದಕ್ಕೆ ಆಗಲಿಲ್ಲ. ಇದಕ್ಕಾಗಿ ಏನೊಂದು ಒಳ್ಳೆಯ ಸುದೈವ ಅವರಿಗೆ ಸಿಕ್ಕಿತು ಅದನ್ನು ಅವರು ಏಕೋ ಸರಿಯಾಗಿ ಬಳಸಿಕೊಳ್ಳಲಿಲ್ಲ ಎನ್ನತಕ್ಕಂಥ ಪ್ರಾಮಾಣಿಕ ಅನಿಸಿಕೆ ನನ್ನಲ್ಲಿ ಬರುತ್ತಿದೆ. ಆದರೆ ಈ ಆಯವ್ಯಯವನ್ನು ನೋಡಿದಾಗ ಒಂದು ಸಮಾಧಾನ ತರುವಂಥ ವಿಚಾರ ಎಂದರೆ ಈ ರಾಜ್ಯಕ್ಕೆ ಎರಡು ಬೃಹತ್ ಸಮಸ್ಯೆಗಳಿವೆ. ಎರಡು ಸಾವಿರ ಇಸವಿ ಒಳಗಡೆ ನಾವು ಕೃಷ್ಣಾನದಿ ನೀರನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಬೇಕು ಎನ್ನತಕ್ಕಂಥಾದ್ದು. ಅದಕ್ಕಾಗಿ ಇವತ್ತು ನೀರಾವರಿ ಯೋಜನೆಗಳಿಗೆ 1629.06 ಕೋಟಿ ಅಂದರೆ ಶೇಕಡಾ 30.43 ಭಾಗ ಮತ್ತು ಇಂದನ ಉತ್ಪಾದನೆಗೆ ಇವತ್ತು ರಾಜ್ಯ ಬಹಳಷ್ಟು ವಿದ್ಯುಚ್ಛಕ್ತಿ ಅಭಾವವನ್ನು ಎದುರಿಸುತ್ತಿದೆ. ಅದು ಎಲ್ಲರಿಗೂ ಅನುಭವ ಆಗಿರತಕ್ಕಂಥಾದ್ದು. ಅದಕ್ಕಾಗಿ ಶೇಕಡಾ 16.25 ಅಂದರೆ 869.94 ಕೋಟಿಯಷ್ಟು ಮೊತ್ತವನ್ನು ತಾವು ಕಾಯ್ದಿರಿಸಿರತಕ್ಕಂಥಾದ್ದು ನಿಜವಾಗಿಯೂ ಮೆಚ್ಚತಕ್ಕಂಥ ಮಾತು. ಆದರೆ ಒಂದು ವಿಚಾರವೆಂದರೆ ಇಷ್ಟು ಬೃಹತ್ ಮೊತ್ತವನ್ನು ಒದಗಿಸಿದಾಗ ಇದು ಸಂಪೂರ್ಣ ಸದ್ ಬಳಕೆಯಾಗುವುದರ ಬಗ್ಗೆ ಬಹಳ ಎಚ್ಚರಿಕೆಯನ್ನು ಸರ್ಕಾರ ಕಾಪಾಡಿ ಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಸರ್ಕಾರ ಏನು ಸರ್ಕಾರ ಮಾಡಬೇಕೆಂದು ಇಷ್ಟು ಬೃಹತ್ ಮೊತ್ತವನ್ನು ಈ ಎರಡು ಬಾಬುಗಳಲ್ಲಿ ವೆಚ್ಚ ಮಾಡುವುದಕ್ಕೆ ಹೋಗುತ್ತಿದೆ, ಇವರ ನಿರೀಕ್ಷೆಗೆ ಮೀರುವಂಥ ಪ್ರಗತಿ

ಸಾಧ್ಯವಾಗುವುದಿಲ್ಲ. ಇದಕ್ಕೆ ಸಂಬಂಧಪಟ್ಟಂಥ ಸಚಿವರು ಹಾಗೂ ಸನ್ಮಾನ್ಯ ಅರ್ಥಸಚಿವರು ಗಮನದಲ್ಲಿಟ್ಟು ಕೊಳ್ಳುತ್ತಾರೆಂಬ ಆಶಾಭಾವನೆಯ ಮಾತನ್ನು ಈ ಮೂಲಕ ವ್ಯಕ್ತ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಮತ್ತೆ ಇನ್ನೊಂದು ಮಾತನ್ನು ಪುನರಾವರ್ತನೆ ಮಾಡುವುದಕ್ಕೆ ಇಚ್ಚೆಪಡುತ್ತೇನೆ. ಶ್ರೀಮಾನ್ ಸುರೇಶ್ ಕುಮಾರ್‌ರವರು ಮಾತನಾಡುತ್ತಾ ಈ ಚುನಾವಣೆಯ ಒತ್ತಡ ಮತ್ತು ಇತರೆ ಅನೇಕ ರಾಜಕೀಯ ಜಟಿಲತೆಗಳ ಒತ್ತಡದಿಂದ ಅವರು ಈ ಸಾರಿ ಒಳ್ಳೆಯ ಆಯವ್ಯಯ ಕೊಡುವುದಕ್ಕಾಗಲಿಲ್ಲವೋ ಏನೋ ಎಂದು ಹೇಳಿದರು. ನನಗೂ ಕೂಡ ಅದೇ ಅನಿಸುತ್ತದೆ. ಏನೋ ಒಂದು ರೀತಿಯ ಒತ್ತಡದಲ್ಲಿ ಸನ್ಮಾನ್ಯ ಅರ್ಥಸಚಿವರು ಸೇರಿ ಕೊಂಡು ಅದಕ್ಕೆ ಗುರಿಯಾಗಿದ್ದಾರೆ ಮತ್ತು ಜನಪರವಾದ ಆಯವ್ಯಯವನ್ನು ಕೊಡಬೇಕೆಂದು ಚಿಂತನೆ ಮಾಡುವುದಕ್ಕೆ ಸಮಯಾವಕಾಶವನ್ನು ಬಳಸಿಕೊಂಡು ಚಿಂತನೆ ಮಾಡಿದ್ದರೆ, ಈ ಹಿತ್ತಾಳೆ, ಕಂಚು, ತಾಮ್ರ, ಅಲ್ಯುಮಿನಿಯಂನಿಂದ ತಯಾರಿಸಿದ ಅದರಲ್ಲೂ ಗೃಹಬಳಕೆ ವಸ್ತುಗಳು ಇವುಗಳ ಮೇಲೆ ಕರ ವಿಧಿಸುತ್ತಿರಲಿಲ್ಲ. ನಾನು ಒಂದು ಮಾತನ್ನು ಹೇಳುತ್ತೇನೆ. ಸನ್ಮಾನ್ಯ ಅರ್ಥಸಚಿವರು ಕೈಗಾರಿಕೆಯವರ ಅಥವಾ ಬೇರೆಯವರ ಕೋಪಕ್ಕೆ ಗುರಿಯಾಗಲೀ, ಇವರ ಶಾಪಕ್ಕೆ ಗುರಿಯಾಗಲಿ. ಆದರೆ, ಈ ಗೃಹಿಣಿಯರ ಶಾಪಕ್ಕೆ ಗುರಿಯಾಗುವುದು ಬೇಡ. ಗೃಹಿಣಿಯರು ಎಂದರೆ ಹೆಣ್ಣುಮಕ್ಕಳು. ಪಾತ್ರೆಗಳ ಮೇಲೆ 8-10 ರ್‍ಯಾಷನಲೈಸೇಷನ್ ಆಫ್ ಟ್ಯಾಕ್ಸ್ ಎಂದು ಮಾಡುವುದಕ್ಕೆ ಹೋಗಿ, ಇವತ್ತು ತಾಮ್ರ, ಹಿತ್ತಾಳೆ, ಕಂಚು ಮತ್ತು ಅಲ್ಯುಮಿನಿಯಂ ಪಾತ್ರೆಗಳ ಮೇಲೆ ಕೂಡ ಕರ ವಿಧಿಸಿದ್ದಾರೆ. ಈಗಲೂ ಸಮಯ ಮಿಂಚಿಲ್ಲ. ಇವುಗಳ ಮೇಲೆ ಏನು ಹೆಚ್ಚುವರಿ ಮಾಡಿದ್ದೀರಿ ಅದನ್ನು ಕಡಿಮೆ ಮಾಡಿ, ಈ ರಾಜ್ಯದ ಬಡವರು ಮತ್ತು ಮಧ್ಯಮವರ್ಗದಿಂದ ಬರತಕ್ಕ ಜನಗಳ ಮೆಚ್ಚುಗೆಗೆ ಪಾತ್ರವಾಗಬೇಕೆಂದು ಸಲಹೆಯನ್ನು ಈ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ಜನತಾ ಸರ್ಕಾರವಿದ್ದಾಗ, ತಾಳಿಭಾಗ್ಯ, ತಾಳಿಯೋಜನೆ ಎನ್ನತಕ್ಕಂಥ ಒಂದು ಕಾರ್ಯಕ್ರಮ ಇತ್ತು. ಈಗ ಇವರು ಮಾಂಗಲ್ಯಭಾಗ್ಯ ತಂದಿರುವುದು, ಅದರ ಮುಂದುವರೆದ ಭಾಗವೇನೋ ಎಂಬ ಭಾವನೆ ಬರುತ್ತದೆ. ಈ ತಾಳಿಭಾಗ್ಯ, ತಾಳಿಯೋಜನೆ ಎನ್ನತಕ್ಕಂಥ ಒಂದು ಕಾರ್ಯಕ್ರಮ ಇತ್ತು. ಈಗ ಇವರು ಮಾಂಗಲ್ಯಭಾಗ್ಯ ತಂದಿರುವುದು, ಅದರ ಮುಂದುವರೆದ ಭಾಗವೇನೋ ಎಂಬ ಭಾವನೆ ಬರುತ್ತದೆ. ಈ ತಾಳಿಭಾಗ್ಯ ತಾಳಿಯೋಜನೆ ಎಷ್ಟು ಅಯಶಸ್ವಿಯಾಯಿತು ಮತ್ತು ಯಾವ ರೀತಿ ಫಲಕಾರಿಯಾಗಲಿಲ್ಲ ಎನ್ನುವುದು ಅವರಿಗೂ ಕೂಡ ಗೊತ್ತಿದೆ. ಇನ್ನು ನಂತರ ಬಂದ ಸರ್ಕಾರ, ಇದು ಪ್ರಯೋಜನಕಾರಿ ಅಲ್ಲವೆಂದು ಇದನ್ನು ನಿಲ್ಲಿಸಿತು. ಈ ಮಾಂಗಲ್ಯಭಾಗ್ಯ ಯೋಜನೆಯಲ್ಲಿ ಬಡವರ ಅದರಲ್ಲಿಯೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಮನೆ ಮೊದಲನೆಯ ಮಗಳ ವಿವಾಹಕ್ಕೆ 5 ಸಾವಿರ ರೂಪಾಯಿ ಕೊಡತಕ್ಕ ಯೋಜನೆ ಏನಿದೆ, ಇದನ್ನು ತಾವು ಬಹಳ ಎಚ್ಚರಿಕೆಯಿಂದ ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಇದರ ಸದ್ಬಳಕೆಗಿಂತ ದುರುಪಯೋಗ ಹೆಚ್ಚಾಗುತ್ತದೆ. ಒಂದು ವೇಳೆ ಇದನ್ನು ಮುಂದುವರಿಸಿದ್ದೇ ಆದರೆ, ಕುಟುಂಬದ ಕಲ್ಯಾಣ ಯೋಜನೆಯ ಅಡಿಯಲ್ಲಿ ತರಬಹುದು. ಈಗಾಗಲೇ ಎರಡು ಮಕ್ಕಳು ಸಾಕು, ಎರಡು ಮಕ್ಕಳು ಸಾಕು ಎಂದು ಸರ್ಕಾರದ ನೀತಿ ಇದೆ. ಹೆರಿಗೆ ಭತ್ಯೆಯನ್ನು ಎರಡು ಮಕ್ಕಳಿಗೆ ಕೊಡುತ್ತಿದ್ದೀರಿ. ಎಲ್ಲಿ 3-4-5 ಜನ ಹೆಣ್ಣುಮಕ್ಕಳು ಇದ್ದಾರೆ, ಅಂತಹ ಮನೆಯ ಮೊದಲನೇ ಮಗಳಿಗೆ ಐದು ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳುವುದರಲ್ಲಿ ಅರ್ಥ ಇದೆ. ಯಾರಿಗೆ ಎರಡು ಮಕ್ಕಳು ಮಾತ್ರ ಇದ್ದಾರೆ, ಅಂತಹವರಿಗೆ, ಅಂತಹ ಕುಟುಂಬಕ್ಕೆ ಮೊದಲನೇ ಮಗಳ ವಿವಾಹಕ್ಕೆ 5 ಸಾವಿರ ರೂಪಾಯಿ ಕೊಡುತ್ತೇವೆಂಬ ನಿಬಂಧನೆ ಮಾಡುವುದು ತಪ್ಪಾಗುವುದಿಲ್ಲ. ಇದರಿಂದ, ಕುಟುಂಬ ಕಲ್ಯಾಣ

ಯೋಜನೆಯು ಕೂಡ ಭಾಗಶ: ಯಶಸ್ವಿಯಾಗುತ್ತದೆ ಎನ್ನುವ ಸಲಹೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು '' ಅರಿವು '' ಎಂಬ ಒಳ್ಳೆಯ ಕಾರ್ಯಕ್ರಮ ಪ್ರಾರಂಭ ಮಾಡಿದ್ದೀರಿ, ಬಹಳ ಸಂತೋಷ. ಇದರಿಂದ ಈ ರಾಜ್ಯದ ಹಿಂದುಳಿದ ವರ್ಗದ ಮನೆಯಿಂದ ಬರತಕ್ಕಂಥ ಅದರಲ್ಲಿಯೂ ತಾಂತ್ರಿಕ ವಿಷಯಗಳಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಅನೇಕ ಜನ ಯುವಕರಿಗೆ ಒಳ್ಳೆಯದಾಗುವುದಾದರೆ ಈ '' ಅರಿವು '' ಕಾರ್ಯಕ್ರಮವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇನ್ನು ವಸತಿ ಕಾರ್ಯಕ್ರಮದ ಅಡಿಯಲ್ಲಿ ಸನ್ಮಾನ್ಯ ಅರ್ಥಸಚಿವರು ಹೇಳಿದರು. ಇದು ನಿಜವೇ ಇದ್ದಿದ್ದರೆ, ಸಾಮಾನ್ಯವಾಗಿ 1 ಲಕ್ಷ 55 ಸಾವಿರ ಮನೆಗಳನ್ನು ಈ ರಾಜ್ಯದಲ್ಲಿ ಕೊಟ್ಟಿದ್ದರೆ, ಇರುವಂಥ 175 ತಾಲ್ಲೂಕುಗಳಿಗೆ ಇವುಗಳನ್ನು ಹಂಚಿದಾಗ ಕನಿಷ್ಟ ಪಕ್ಷ 450-500 ಮನೆಗಳು ಒಂದೊಂದು ತಾಲ್ಲೂಕಿಗೆ ಬರಬೇಕಾಗಿತ್ತು. ಏಕೋ ಏನೋ ರಾಮನಗರದಲ್ಲಿ 1997 ನೇ ಫೆಬ್ರವರಿ ತಿಂಗಳಿನಲ್ಲಿ ನಡೆದ ಉಪ ಚುನಾವಣೆ ನಂತರ, ಸರ್ಕಾರ ಬಹಳ ಕೋಪಗೊಂಡಿದೆ ಎಂದು ಕಾಣುತ್ತದೆ. ಈ ತಾಲ್ಲೂಕಿಗೆ 450-500 ಮನೆಗಳನ್ನು ಕೊಡಬೇಕಾಗಿತ್ತು. ಹೋದವರ್ಷ ಕೇವಲ 175 ಮನೆಗಳಿಗೆ ಇಳಿಸಿದ್ದಾರೆ. ಇಲ್ಲಿ ಒಟ್ಟಾರೆ 1 ಲಕ್ಷ 55 ಸಾವಿರ ಮನೆಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ, ರಾಮನಗರಕ್ಕೆ ಈ ತಾರತಮ್ಯ ಏಕೆ ಮಾಡಿದ್ದಾರೆಂದು ನನಗೆ ಆಶ್ಚರ್ಯವಾಗುತ್ತದೆ. ಆದ್ದರಿಂದ 1998-99 ನೇ ಸಾಲಿನಲ್ಲಿ ಅವರು ಕೊಡತಕ್ಕ ಒಂದು ಲಕ್ಷ ಚಿಲ್ಲರೆ ಮನೆಗಳಲ್ಲಿ, ರಾಮನಗರ ತಾಲ್ಲೂಕಿಗೆ ಕೊಡುವಾಗ, ಈ ಸಾರಿಯ 400 ಮನೆಗಳ ಜೊತೆ, ಹಿಂದಿನ ಬಾಕಿ ಸುಮಾರು 350 ಮನೆಗಳನ್ನೂ ಸೇರಿಸಿ, ನನಗೆ ಕೊಡಿಸಬೇಕಾಗುತ್ತದೆ ಎನ್ನುವ ವಿಚಾರವನ್ನು ತಮ್ಮ ಮೂಲಕ ಸನ್ಮಾನ್ಯ ಅರ್ಥ ಸಚಿವರು ಹಾಗೂ ಗೈರು ಹಾಜರಿ ಇರತಕ್ಕ ವಸತಿ ಸಚಿವರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ರಸ್ತೆ ಮತ್ತು ಸೇತುವೆಗಳ ವಿಚಾರ. ಈಗಾಗಲೇ ಇದು ಇಡೀ ರಾಜ್ಯದಲ್ಲಿ ಜನಜನಿತವಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕರ್ನಾಟಕದ ಕೆಲವು ಭಾಗಗಳಿಗೆ ಪ್ರವಾಸ ಹೋದಾಗ ಸಾಮಾನ್ಯವಾಗಿ ಜನರು ಮನವಿಗಳನ್ನು ಕೊಟ್ಟರು. ಸ್ವಾಮಿ, ಈ ರಸ್ತೆಗಳು ಸರಿಯಾದ ಸ್ಥಿತಿಯಲ್ಲಿ ಇಲ್ಲ, ವಾಹನ ಸಂಚಾರಕ್ಕೆ ತೊಂದರೆಯಾಗಿದೆ, ನಮಗೆ ವಾಹನಗಳು ಬರುತ್ತಾ ಇಲ್ಲ ದಯವಿಟ್ಟು ಈ ರಸ್ತೆಗಳನ್ನು ಸರಿಪಡಿಸಿ ಎಂದು ಕೇಳಿಕೊಂಡರು. ಅದಕ್ಕೆ, ಅವರು ವಾಹನಗಳನ್ನು ಬಿಟ್ಟು, ಕುದುರೆ ಮೇಲೆ ತಿರುಗಾಡಿ ಎಂದು ಅಣತಿಯನ್ನು ಕೊಟ್ಟಿದ್ದಾರೆ. ಆದರೂ ಕೂಡ ಸನ್ಮಾನ್ಯ ಅರ್ಥಸಚಿವರು ಹೇಳುತ್ತಾರೆ. ಹೋದವರ್ಷದ ಪ್ರಸ್ತಾವನೆಗಿಂತ ಶೇಕಡ 46.70 ಹೆಚ್ಚು ಹಣವನ್ನು ಈ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗಾಗಿ ಕೊಟ್ಟಿದ್ದೇನೆ. ಇದರ ಜೊತೆಗೆ ಮುಂದಿನ ಮೂರು ವರ್ಷಗಳಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಅಂಡ್ ಫೈನಾನ್ಸ್ ಕಾರ್ಪೊರೇಷನ್ ಎಂಬ ಹೊಸ ನಿಗಮದ ಮೂಲಕ 800 ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ಉದ್ದೇಶ ಇಟ್ಟುಕೊಂಡಿದ್ದೇವೆಂದು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಎನ್. ಹೆಚ್. (4) ರಲ್ಲಿ ಸಂಚಾರ ಮಾಡುತ್ತಿದ್ದಾಗ, ಒಂದು ಬೋರ್ಡ್ ಬಹಳ ಚೆನ್ನಾಗಿ ಕಾಣಿಸುತ್ತದೆ. Good roads indicate the culture and heritage of the nation ಎಂದು. ಇದು ಹಣಕಾಸಿನ ಸಚಿವರಿಗೆ ಚೆನ್ನಾಗಿ ಗೊತ್ತಿದೆ. ಇವತ್ತು ಈ ರಸ್ತೆಗಳು ಚೆನ್ನಾಗಿದ್ದರೆ, ಈ ರಾಜ್ಯದ ಅನೇಕ ಆರ್ಥಿಕ ಚಟುವಟಿಕೆಗಳು ನಡೆಯುವುದಕ್ಕೆ ಅವಕಾಶವಾಗುತ್ತದೆ. ಇವರು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಶೇಕಡ 46 ಚಿಲ್ಲರೆ ಹೆಚ್ಚು ಮೊತ್ತವನ್ನು ಹೋದ ವರ್ಷಕ್ಕೆ ಹೋಲಿಕೆ ಮಾಡಿ ಕೊಟ್ಟಿದ್ದೇವೆಂಬ ಮಾತನ್ನು ಹೇಳಿದ್ದಾರೆ. ಮತ್ತೆ ಮೂರು ವರ್ಷಗಳಲ್ಲಿ 800 ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಖರ್ಚುಮಾಡುತ್ತೇವೆಂಬ ಮಾತನ್ನೂ ಹೇಳಿದ್ದಾರೆ. ಆದರೆ, ವಸ್ತುಸ್ಥಿತಿ ಈ ವರ್ಷಗಳಿಂದ ನಬಾರ್ಡ್-1, ನಬಾರ್ಡ್-2, ಈ ಯೋಜನೆಯ ಅಡಿಯಲ್ಲಿ ಕೇಂದ್ರದಿಂದ ಸಾಲ

ಬರದೇ ಹೋಗಿದ್ದರೆ, ಬಹುಶ: ಲೋಕೋಪಯೋಗಿ ಇಲಾಖೆಯಲ್ಲಿ ಏನು ಕೆಲಸ ಮಾಡುತ್ತಿದ್ದರು ಎಂಬ ಪ್ರಶ್ನೆಯನ್ನು ಇಲ್ಲಿ ಹಾಕಬೇಕಾಗುತ್ತದೆ. ಈ ಹಣ ಬಂದಿರುವುದರಿಂದ ಅಷ್ಟೋ ಇಷ್ಟೋ ಕೆಲಸ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ಚಟುವಟಿಕೆ ಇದೆ. ಜೊತೆಗೆ ಒಂದಷ್ಟು ಹಣಕಾಸಿನ ವಹಿವಾಟು ಇದೆ. ಇದು ಇಲ್ಲದೇ ಹೋಗಿದ್ದರೆ, ರಾಜ್ಯ ಸರ್ಕಾರವನ್ನೇ ನಂಬಿದ್ದರೆ, ಬಹಳ ಹೀನಾಯವಾದ ಪರಿಸ್ಥಿತಿ ಇರುತ್ತಿತ್ತು ಎಂಬ ವಿಚಾರವನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ತಾವು ಈಗ ಉದ್ದೇಶಪಟ್ಟಿರುವಂತೆ, ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಫೈನಾನ್ಸ್ ಕಾರ್ಪೋರೇಷನ್‌ನನ್ನು ಇವತ್ತು ಹೊಸದಾಗಿ ನಿರ್ಮಾಣ ಮಾಡುವುದರಿಂದ ಹಾಲಿ ನಿಮ್ಮಲ್ಲಿ ಇರತಕ್ಕಂಥ ಲೋಕೋಪಯೋಗಿ ಇಲಾಖೆಯಲ್ಲಿ ಏನೊಂದು ಸಿಬ್ಬಂದಿ ಮತ್ತು ವ್ಯವಸ್ಥೆ ಇದೆ, ಇದಕ್ಕೆ ಸಮಾನಾಂತರವಾಗಿ ಇನ್ನೊಂದು ಹೊಸ ಸಂಸ್ಥೆಯನ್ನು ಬೆಳೆಸಿದ ಆಗುವುದಿಲ್ಲವೇ ಎನ್ನತಕ್ಕಂಥ ವಿಚಾರವನ್ನು ತಾವು ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕೆಂದು ಈ ಮೂಲಕ ಪ್ರಸ್ತಾಪಮಾಡುತ್ತಿದ್ದೇನೆ. ಮಾನ್ಯ ಅರ್ಥಸಚಿವರು ಹೋದ ವರ್ಷದ ಬಜೆಟ್‌ನಲ್ಲಿ ಒಂದು ವಿಷಯವನ್ನು ಪ್ರಸ್ತಾಪಮಾಡಿದ್ದರು. ಅದೇನೆಂದರೆ ರೋಡ್ ಫಂಡ್ ಎಂದು ಪ್ರತ್ಯೇಕ ನಿಧಿಯನ್ನಾಗಿ ನಿರ್ಮಾಣ ಮಾಡಿ, ಸಂಬಂಧಪಟ್ಟ, ಅದಿರು, ಸುಣ್ಣ ಮತ್ತು ಕಲ್ಲುಗಣಿ ಸಾಗಾಣಿಕೆ ಮಾಡತಕ್ಕಂಥ ಪ್ರದೇಶದಲ್ಲಿ ರಸ್ತೆಗಳನ್ನು ಅಭಿವೃದ್ಧಿ ಮಾಡಿಸತಕ್ಕಂಥ ಪ್ರಸ್ತಾವನೆಯನ್ನು ಸಲ್ಲಿಸಿದ್ದರು, ಆದರೆ ಅದು ಇವತ್ತಿನವರೆಗೂ ಕಾರ್ಯಗತವಾಗಿಲ್ಲ. ಹೋದಸಾರಿ ಅವರು ತಮ್ಮ ಉತ್ತರದಲ್ಲಿ, ಇದನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆಂದು ಹೇಳಿದ್ದರು. ನಾನು ಈ ವಿಷಯವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನನ್ನ ಕ್ಷೇತ್ರವಾದ ರಾಮನಗರ, ಕನಕಪುರ ಮತ್ತು ಮಾಗಡಿ, ಈ ಮೂರು ತಾಲ್ಲೂಕುಗಳಲ್ಲಿ ಬಹಳ ಹೆಚ್ಚಿನ ಗ್ರಾನೈಟ್ ಲಾರಿಗಳು ಸಾಗಾಣಿಕೆ ಆಗುತ್ತದೆ, ಇದರಿಂದ ರಸ್ತೆಗಳು ಬಹಳಷ್ಟು ಕೆಟ್ಟಿದೆ. ಇದರಿಂದ ಜನ ಸರ್ಕಾರವನ್ನು ದೂಷಣೆ ಮಾಡುವುದಿಲ್ಲ, ಸಂಬಂಧಪಟ್ಟ ಶಾಸಕರನ್ನು ಬಹಳ ಹೀನಾಯವಾಗಿ ದೂಷಣೆ ಮಾಡುತ್ತಾರೆ. ಅಲ್ಲಿಗೆ ಹೋದರೆ, ಈ ರಸ್ತೆಯಲ್ಲಿ ಬಂದಿದ್ದೀರಾ, ರಸ್ತೆ ಎಷ್ಟು ಹೀನಾಯವಾಗಿದೆ ಮತ್ತು ದುಸ್ಥಿತಿಯಲ್ಲಿದೆ ನೋಡಿದ್ದೀರಾ ಎಂದು ಕೇಳುತ್ತಾರೆ. ಈಗಲೂ ಕೂಡ ಆ ನಿಧಿಯ ಮೂಲಕ ಹಣವನ್ನು ಸಂಗ್ರಹಣೆ ಮಾಡಿದ್ದರೆ, ಹಣವನ್ನು ಕೂಡಲೇ ಬಿಡುಗಡೆಮಾಡಬೇಕು. ಒಂದು ವೇಳೆ ಹಾಗೆ ಆಗದೆ ಇದ್ದರೆ, ತಮ್ಮ ಮುಂದಿನ ಆಯವ್ಯಯದಲ್ಲಿ ಇಂಥ ರಸ್ತೆಗಳಿಗೆ ಆದ್ಯತೆಯ ಗಮನವನ್ನು ಹರಿಸಬೇಕೆಂದು ಕಳಕಳಿಯ ಪ್ರಾರ್ಥನೆಯನ್ನು ಅಧ್ಯಕ್ಷರ ಮೂಲಕ ಸನ್ಮಾನ್ಯ ಅರ್ಥಸಚಿವರಿಗೆ ನೀಡುತ್ತಿದ್ದೇನೆ. ಇನ್ನು ಬೆಂಗಳೂರು ವಿಷಯ, ಬಹಳ ಜನಗಳ ಬಾಯಿಯಲ್ಲಿ ಬಹಳ ಸುಂದರವಾದ ಪಟ್ಟಣ, ಉದ್ಯಾನಿಗಳ ನಗರಿ, ಬಹಳ ಸೊಗಸಾದ, ಹಿತಕರವಾದ ಹವಾಮಾನ ಇರತಕ್ಕಂಥ ಊರು ಮತ್ತು ಪೆನ್‌ಷನರ್ಸ್ ಪ್ಯಾರಡೈಸ್, ಇನ್ನು ಅನೇಕ ಬಿರುದುಗಳನ್ನು;ು ಪಡೆದುಕೊಂಡಂತಹ ಬೆಂಗಳೂರಿನ ಸ್ಥಿತಿ ಬಗ್ಗೆ ತಮಗೂ ಮತ್ತು ಇಲ್ಲಿರತಕ್ಕಂಥ ಎಲ್ಲಾ ಸದಸ್ಯರಿಗೂ ಅನುಭವ ಇದೆ. ಬೆಂಗಳೂರು ಸಮೀಪ ಬರುವವರೆಗೆ ಒಂದು ರೀತಿ, ಸಮೀಪ ಬಂದು ಒಳಗೆ ಬರತಕ್ಕಂಥದ್ದಾಗಲಿ, ಬೆಂಗಳೂರು ಮಧ್ಯಭಾಗದಿಂದ ಹೊರಕ್ಕೆ ಹೋಗತಕ್ಕಂಥದ್ದಾಗಲಿ, ಈ ಎರಡೂ, ಕೂಡ ಬಹಳ ದುಸ್ಸಾಹಸದ ಕೆಲಸವಾಗಿದೆ. ನನಗೆ ನೆನಪು ಇರುವ ಹಾಗೆ ಸನ್ಮಾನ್ಯ ಶ್ರೀ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಯಾದ ಕಾಲದಿಂದಲೂ ಕೂಡ, ಬೆಂಗಳೂರಿನಲ್ಲಿ ಫ್ಲೈಓವರ್‌ಗಳನ್ನು ಮಾಡಬೇಕೆಂಬ ಪ್ರಸ್ತಾವನೆಗಳು ಬರುತ್ತಿದ್ದವು. ಆದರೆ ಈ ಸರ್ಕಾರ ಬಂದಮೇಲೆ ಒಂದು ಪ್ರಾಮಾಣಿಕ ಪ್ರಯತ್ನ ನಡೆದಿದೆ. ಈಗ ಮೈಸೂರು ಸರ್ಕಲ್‌ನಿಂದ ಟೌನ್‌ಹಾಲ್‌ವರೆಗೆ ಫ್ಲೈಓವರ್ ಕೆಲಸ ಪ್ರಾರಂಭವಾಗಿದೆ. 1978-79 ನೇ ಇಸವಿಯಲ್ಲಿ ಈ ಚಿಂತನೆ ಮಾಡಿ, ಒಂದು

ವರ್ಷಕ್ಕೆ ಒಂದು ವೃತ್ತದಲ್ಲಿ ಫ್ಲೈಓವರ್ ಮಾಡುತ್ತಾ ಬಂದಿದ್ದರೆ, ಬಹುಶ: ಬೆಂಗಳೂರಿನಲ್ಲಿ ಇವತ್ತು ಹತ್ತಾರು ಫ್ಲೈಓವರ್‌ಗಳು ಇರುತ್ತಿದ್ದವು ಮತ್ತು ವಾಹನ ಸಂಚಾರ ಇಷ್ಟೊಂದು ಕ್ಲಿಷ್ಟವಾಗುತ್ತಿರಲಿಲ್ಲ ಮತ್ತು ಸರ್ಕಲ್‌ಗಳಲ್ಲಿ ವಾಹನಗಳ ದಟ್ಟಣೆ ಇಷ್ಟೊಂದು ಉಂಟಾಗುತ್ತಿರಲಿಲ್ಲ. ದಯಮಾಡಿ ಇನ್ನು ಮುಂದೆ ಆದರೂ ವರ್ಷಕ್ಕೆ ಒಂದರಂತೆ ಒಂದು ವೃತ್ತದಲ್ಲಿ ಫ್ಲೈಓವರ್ ಮಾಡತಕ್ಕಂಥ ಯೋಜನೆಯನ್ನು ತಾವು ಕೈಗೆತ್ತಿಕೊಳ್ಳಬೇಕು, ಇಲ್ಲದಿದ್ದರೆ ಈ ಊರನ್ನು ಬಹುಶ: ಮುಂದೆ ಮನುಷ್ಯರು ಕಾಪಾಡುವುದಕ್ಕೆ ಆಗುವುದಿಲ್ಲ. ದೇವರು ಎನ್ನತಕ್ಕಂಥ ಒಂದು ಅದೃಷ್ಟ ಶಕ್ತಿ ಇದ್ದರೆ ಈ ಊರನ್ನು ಕಾಪಾಡಬಹುದು ಎಂಬ ಮಾತನ್ನು ಹೇಳುತ್ತಾ, ಕಡೆಯದಾಗಿ ನಮ್ಮ ಅರ್ಥ ಸಚಿವರು ಕೊಟ್ಟಿರತಕ್ಕಂಥ 196.62 ಕೋಟಿ ರುಪಾಯಿಗಳ ಕೊರತೆ ಏನು ಇದೆ, ಇದನ್ನು ಅವರು ಬಹಳ ಸುಲಭವಾಗಿ ಈಗಲೂ ನೀಗಿಸಿ ಕೊಳ್ಳಬಹುದು. ಇದನ್ನು ವರ್ಷದವರೆಗೆ ಬಿಡುವಂತಹ ಅವಶ್ಯಕತೆ ಇಲ್ಲ. ಇವತ್ತಿನವರೆಗೆ ನೀವು ಅಬ್ಕಾರಿ ಬಾಬ್ತಿನಿಂದ ಬರಬೇಕಾಗಿರತಕ್ಕಂಥ ಆದಾಯವನ್ನು ಸಮರ್ಥವಾಗಿ ಮತ್ತು ಸಮರ್ಪಕವಾಗಿ ಅದನ್ನು ವಸೂಲು ಮಾಡತಕ್ಕಂಥ ಮತ್ತು ಅದರಿಂದ ಬರುವ ಆದಾಯವನ್ನು ಸರಿಯಾಗಿ ವಸೂಲು ಮಾಡುವುದರಲ್ಲಿ ಬಹಳ ವಿಫಲರಾಗಿದ್ದೀರಿ ಎಂದು ಹೇಳಬೇಕಾಗುತ್ತದೆ. ಇವತ್ತು ಲಿಕ್ಕರ್‌ನಲ್ಲಿ ಫಸ್ಟ್ ಮತ್ತು ಸೆಕೆಂಡ್ಸ್, ಥರ್ಡ್ಸ್ ಎಂದು ಮೂರು ಟೈಪ್ ಇದೆ. ಸೆಕೆಂಡ್ಸ್ ಮತ್ತು ಥರ್ಡ್ಸ್‌ನಲ್ಲಿ ನಿಮ್ಮ ಬೊಕ್ಕಸಕ್ಕೆ ಬರಬೇಕಾಗಿರತಕ್ಕಂಥ ನೂರಾರು ಕೋಟಿ ರುಪಾಯಿಗಳ ಆದಾಯವನ್ನು ವಂಚಿಸಿ, ನಿಮ್ಮ ಸಿಬ್ಬಂದಿಗಳ ಅನೇಕರ ಗಮನಕ್ಕೂ ಗೊತ್ತಿದ್ದರೂ ಕೂಡ, ಅವರ ಕಣ್ಣೆದುರಿನಲ್ಲಿಯೇ ಮತ್ತು ಅವರ ಮೂಗಿನಡಿಯಲ್ಲಿ ಈ ವಹಿವಾಟು ನಿರಾತಂಕವಾಗಿ ನಡೆದು ಕೊಂಡು ಹೋಗುತ್ತಿದೆ. ಇದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಗು ಗೊತ್ತಿದೆ, ಇದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದರಲ್ಲಿ ಶೇಕಡ ಅರ್ಧದಷ್ಟು ಆದರೂ ಶಿಸ್ತಿಗೆ ತರಬೇಕು. ಶೇಕಡ ಅರ್ಧದಷ್ಟು ಸೆಕೆಂಡ್ಸ್ ಮತ್ತು ಥರ್ಡ್ಸ್ ವ್ಯವಹಾರದಲ್ಲಿ ನೀವು ನಿಯಂತ್ರಣ ತಂದರೆ ಕನಿಷ್ಠ ಪಕ್ಷ ಈ ವರ್ಷದಲ್ಲಿ ಸುಮಾರು 600 ರಿಂದ 800 ಕೋಟಿ ರೂಪಾಯಿವರೆಗೆ ವಸೂಲಿ ಆಗುತ್ತದೆ. ಇದರಿಂದ ನಿಮ್ಮ ಕೊರತೆಗಳನ್ನು ನೀಗಿಸಿಕೊಳ್ಳುವುದಕ್ಕೆ ಮತ್ತು ರಾಜ್ಯದ ಇತರೆ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ತಮ್ಮ ಕೈಗೆ ಬಹಳ ಬೃಹತ್ ಮೊತ್ತದ ಹಣ ದೊರೆಯುತ್ತದೆ. ಆದ್ದರಿಂದ ತಾವು ದಯಮಾಡಿ ಈ ಇಲಾಖೆಯಲ್ಲಿ ಒಂದು ಶಿಸ್ತನ್ನು ಮಾತ್ತು ಪ್ರಾಮಾಣಿಕತೆಯ ಕಾಳಜಿಯನ್ನು ಮೂಡಿಸಬೇಕು ಮತ್ತು ಇದರ ವಸೂಲಾತಿಯನ್ನು ಇನ್ನು ಪರಿಣಾಮಕಾರಿಯಾಗಿ ಮಾಡಬೇಕೆಂದು ಹೇಳುತ್ತೇನೆ. ಕಡೆಯದಾಗಿ ಈ ರಿಜಿಸ್ಟ್ರೇಷನ್ ಮತ್ತು ಸ್ಟ್ಯಾಂಡ್, ಇವತ್ತು ಇದು ಏನಾಗಿದೆ ಎಂದರೆ ಚಾಪೆ ಕೆಳಗೆ ಒಬ್ಬರು ತೂರಿದರೆ ರಂಗೋಲಿ ಕೆಳಗಡೆ ಇನ್ನೊಬ್ಬರು ತೂರುವಂತೆ ಆಗಿದೆ. ಆಸ್ತಿಯ ವಹಿವಾಡಿನಲ್ಲಿ,ಒಡಂಬಡಿಕೆ ಆದ ಮೊತ್ತಕ್ಕೆ ಯಾರೂ ರಿಜಿಸ್ಟ್ರೇಷನ್ ಮಾಡಿಸುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದ ಸರ್ಕಾರ, ಆಸ್ತಿಯ ಬೆಲೆಯನ್ನು ಆಯಾಯ ಸಂಬಂಧ ಪಟ್ಟ ಪ್ರದೇಶಗಳಲ್ಲಿ ಯದ್ವಾತದ್ವ ಏರಿಸಿದೆ. ಉದಾಹರಣೆಗೆ, ನನ್ನ ತಾಲ್ಲೂಕಿನಲ್ಲಿ, ರಾಮನಗರದಿಂದ 4 ಕಿ.ಮೀ. ದೂರದಲ್ಲಿ ಬಸವನಪುರ ಎಂಬ ಹಳ್ಳಿ ಇದೆ. ಇವತ್ತು ಅಲ್ಲಿ 30 X 40 ನಿವೇಶನದ ಬೆಲೆ ಏನೇ ದುಬಾರಿ ಆದರೂ ಸುಮಾರು 60 ಸಾವಿರದಲ್ಲಿ ದೊರೆಯುತ್ತದೆ. ಆದರೆ ಸಬ್‌ರಿಜಿಸ್ಟ್ರಾರ್ ಕಛೇರಿಗೆ ಹೋದರೆ, 2 ಲಕ್ಷ ರೂಪಾಯಿಗಳ ರಿಜಿಸ್ಟ್ರೇಷನ್ ಮಾಡಿಸಬೇಕೆಂದು ಅವರು ಹೇಳುತ್ತಾರೆ. ಇವತ್ತು ಎರಡು ಲಕ್ಷ ರೂಪಾಯಿಗೆ ರಿಜಿಸ್ಟ್ರೇಷನ್ ಮಾಡಿಸಿದರೆ, 60 ಸಾವಿರ ಕೊಟ್ಟು ತೆಗೆದುಕೊಂಡಿರುವ ಸೈಟ್‌ಗೆ ರಿಜಿಸ್ಟ್ರೇಷನ್‌ಗೆ 30ಸಾವಿರ ರೂಪಾಯಿಗಿಂತ ಹೆಚ್ಚು ಖರ್ಚಾಗುತ್ತದೆ. ಆದ್ದರಿಂದ ರಿಜಿಸ್ಟ್ರೇಷನ್ ಮಾಡಿಸುವುದಿಲ್ಲ. ಒಂದು ಅಗ್ರಿಮೆಂಟ್‌ನ್ನು ಬರೆಸಿಕೊಂಡು ಸರ್ಕಾರಕ್ಕೆ, ಕೊಡಬೇಕಾದ ಶುಲ್ಕವನ್ನು

ವಂಚಿಸುತ್ತಾರೆ. ಇಂಥ ಪ್ರಕರಣಗಳು ಇವತ್ತು ಹತ್ತಾರು, ಸಾವಿರಾರು, ಲಕ್ಷ ಇರಬಹುದು. ತಾವು ದಯಮಾಡಿ ಖಂಡಿತ ಕಡಿಮೆ ಮಾಡಬೇಕು. ಪಟ್ಟಣ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಆಸ್ತಿಗಳ ವಹಿವಾಟು ಏನು ಮಂದಗತಿಯಲ್ಲಿ ಸಾಗಿದೆ, ಅದು ಬಹಳ ಚುರುಕಾಗುತ್ತದೆ. ನೀವು ಇವತ್ತು ಹೆಚ್ಚು ಬೆಲೆಯನ್ನು ನಿಗದಿ ಮಾಡಿ ಹೆಚ್ಚು ಆದಾಯವನ್ನು ನಿರೀಕ್ಷೆ ಮಾಡಿದ್ದೀರಿ, ಅದಕ್ಕಿಂತಲೂ ಮಿಗಿಲಾದ ಆದಾಯವನ್ನು ತಾವು ಪಡೆಯಬಹುದು. ಇದರ ಬಗ್ಗೆ ತಾವು ವಾಸ್ತವಿಕವಾದ ದೃಷ್ಟಿಯನ್ನು ಪಡೆಯಬೇಕು. ಇವತ್ತು ಆಸ್ತಿಯ ಮೇಲೆ ಅನ್‌ರಿಯಲ್‌ಸ್ಟಿಕ್ ವ್ಯಾಲ್ಯೂ ಏನು ಫಿಕ್ಸ್ ಮಾಡಿದ್ದೀರಿ, ಇದನ್ನು ತಾವು ದಯವಿಟ್ಟು ಕಡಿಮೆ ಮಾಡಿ ಸರ್ಕಾರಕ್ಕೆ ಹೆಚ್ಚಿನ ಆದಾಯವನ್ನು ತಂದು ಕೊಡುವ ಬಾಬ್ತನ್ನು ಮತ್ತೆ ಒಂದು ಪುನರ್ ಜೀವನ ಮಾಡಬೇಕಂಬ ಮಾತನ್ನು ಹೇಳುತ್ತಾ, ಕಡೆಯದಾಗಿ ಮತ್ತೊಮ್ಮೆ ಹೇಳುವುದಾದರೆ, ಈ ರಾಜ್ಯ ಸನ್ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಒಳ್ಳೆಯ ಆಯವ್ಯಯವನ್ನು ನಿರೀಕ್ಷೆ ಮಾಡಿತ್ತು, ಆದರೆ ಅವರು ರಾಜ್ಯದ ಜನತೆಗೆ ನಿರಾಶೆ ಮಾಡಿದ್ದಾರೆ. ಇದಕ್ಕೆ ನಾನು ಬಹಳ ಅತೀವವಾದ ವಿಷಾದವನ್ನು ವ್ಯಕ್ತ ಮಾಡಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

(೬) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ :- ಸರ್ಕಾರದ ಸ್ಥಿರತೆ ಬಗ್ಗೆ

★ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ರಾಜಕೀಯ ಗೊಂದಲ ಬಗ್ಗೆ ಪತ್ರಿಕೆಗಳಲ್ಲಿ ಬರುತ್ತಿದೆ, ಆದ್ದರಿಂದ ನೀವೆಲ್ಲಾ ಎಚ್ಚರದಿಂದ ಇದ್ದೀರಾ ಎಂದು ಈ ಸದನದಲ್ಲಿ ಕೇಳುತ್ತಿದ್ದೇನೆ. ಈಗಾಗಲೇ ಲೋಕಶಕ್ತಿ ಮತ್ತು ಬಿಜೆಪಿ ಮೈತ್ರಿಯಾಗಿ ಕರೆದರೆ ನಾನು ರಾಜ್ಯದ ಮುಖ್ಯಮಂತ್ರಿಯಾಗಲು ತಯಾರಾಗಿದ್ದೇನೆಂದು ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ನಾನು ಏಕೆ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ, ಸದನ ನಡೆಯುವಾಗ ಅವರು ಕೇಂದ್ರದಲ್ಲಿ ಮಂತ್ರಿಯಾಗಿ ಅಲ್ಲಿ ಇರುವುದನ್ನು ಬಿಟ್ಟು ರಾಜಕಾರಣಕ್ಕೆ ಕರೆದರೆ ಇಲ್ಲಿಯೂ ಮುಖ್ಯಮಂತ್ರಿ ಆಗುತ್ತೇನೆಂದು ಹೇಳಿದ್ದಾರೆ. ಇದಕ್ಕೆ ಲೋಕಶಕ್ತಿ ಮತ್ತು ಬಿಜೆಪಿಯವರು ಕರೆದರೆ ನಾನು ಬರುವುದಕ್ಕೆ ಸಿದ್ಧ ಎನ್ನತಕ್ಕಂಥ ಮಾತನ್ನು ರಾಮಕೃಷ್ಣ ಹೆಗಡೆಯವರು ಹೇಳಿದ್ದಾರೆ. : ಇದೇನು ಪರಿಸ್ಥಿತಿ? ನಿಮ್ಮಲ್ಲಿ ಕೆಲವು ಶಾಸಕರು ಹೋಗಿದ್ದಾರೆಂದು ತಿಳಿದು ಬಂದಿದೆ, ಈ ಸಭೆ ನಡೆಯುವಾಗ ಇದು ರಾಜ್ಯದ ಬಹಳ ಪ್ರಮುಖವಾದ ವಿಚಾರ, ಇದೊಂದು ಸ್ಥಿರ ಸರ್ಕಾರ ಮತ್ತು ಭದ್ರವಾಗಿದೆ ಎಂದು ನಾವು ತಿಳಿದು ಕೊಂಡಿದ್ದೇವೆ. ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಮಾನ್ಯ ಉಪಮುಖ್ಯಮಂತ್ರಿಗಳು ಇದ್ದಾರೆ. ಹಿರಿಯ ಮಂತ್ರಿಗಳು ಇದ್ದಾರೆ. ತಾವು ಸ್ಪಷ್ಟಪಡಿಸಬೇಕು, ಒಂದೊಂದು ದಿನ ಒಂದೊಂದು ಕಡೆ ಪತ್ರಿಕೆಯಲ್ಲಿ ಈ ರೀತಿ ಬರುತ್ತಿದ್ದರೆ ಇದರ ಬಗ್ಗೆ ಏನು?

(ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ರವರು ಪೀಠವನ್ನಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್ :- ಸದನ ನಡೆಯುತ್ತಿರುವಾಗ ನೀವು ಕರೆದರೆ ನಾನು ಮುಖ್ಯಮಂತ್ರಿಯಾಗಿ ಬರುತ್ತೇನೆ ಎಂದು ಹೇಳಿದ್ದಾರೆ. ಇಲ್ಲಿ ಏನೋ ನಡೆಯುತ್ತಿರಬೇಕು.

ಶ್ರೀ ಕಾಗೋಡು ತಿಮ್ಮಪ್ಪ :- ಆ ರೀತಿ ಏನಾದರೂ ಬದಲಾವಣೆ ಆದರೆ ಹೊಸದಾಗಿ ಬಜೆಟ್ ಮಂಡನೆ ಆಗಬೇಕು.